ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka Scout & Guide

Monthly Magazine

Vol -65	Issue-07	July 2024	Pages: 32	Annual Subscription: ₹ 100/-
ಸಂಪುಟ: 65	ಸಂಚಿಕೆ: 07	ಜುಲೈ 2024	ಪುಟಗಳು: 32	ವಾರ್ಷಿಕ ಚಂದ ರೂ. 100/-

ಜೂನ್ 5ರಂದು "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಸಂಯುಕ್ತಾಶ್ರಯದಲ್ಲಿ ವಿಧಾನಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ಹಮ್ಮಿಕೊಂಡಿದ್ದ 'ಪರಿಸರ ಜನಜಾಗೃತಿ ಜಾಥಾ'ವನ್ನು ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಹಾಗೂ ದಳನಾಯಕರುಗಳು ವಿಧಾನಸೌಧದ ಮುಂಭಾಗದಲ್ಲಿ.

ಜುಲೈ 07ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕರ್ನಾಟಕ ಸರ್ಕಾರದ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಸ್ಕೌಟ್ಸ್–ಗೈಡ್ಸ್ ಕೇಂದ್ರ ಕಛೇರಿ 'ಶಾಂತಿಗೃಹ'ದ ಒಳಾಂಗಣ ರಸ್ತೆಗೆ ಬಿ.ಬಿ.ಎಂ.ಪಿಯಿಂದ ಸಿಮೆಂಟ್ ರಸ್ತೆ ಮಾಡಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು. ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ಸಹಾಯ–ಸಹಕಾರ ನೀಡಬೇಕೆಂದು ಮನವಿ ಮಾಡಲಾಯಿತು. ಮಾನ್ಯ ಉಪಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.

ಜುಲೈ 24 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕೇಂದ್ರ ಕಛೇರಿಯ "ಕೊಂಡಜ್ಜಿ ಬಸಪ್ಪ ಸಭಾಂಗಣ"ದಲ್ಲಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಪರಿಸರ ವಸ್ತು ಪ್ರದರ್ಶನವನ್ನು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಅವರು ಉದ್ಘಾಟಿಸಿದರು. ಪರಿಸರ ತಜ್ಞರಾದ ಶ್ರೀ ನಾಗೇಶ್ ಹೆಗಡೆ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಸಂಸ್ಥೆಯ ಮಹಾನಿರ್ದೇಶಕರಾದ ಶ್ರೀ ಬಿ.ಪಿ. ರವಿ, ಭಾ.ಅ.ಸೇ., ವಿಧಾನ ಪರಿಷತ್‌ನ ಮಾಜಿ ಸದಸ್ಯ ಶ್ರೀ ಮೋಹನ್ ಕೊಂಡಜ್ಜಿ, ಸಮಗ್ರ ಶಿಕ್ಷಣ ಇಲಾಖೆ ನಿರ್ದೇಶಕರಾದ ಶ್ರೀ ಎಂ.ಆರ್. ಮಾರುತಿ ಮತ್ತು ರಾಜ್ಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್–ಗೈಡ್ಸ್‌ಗಳು, ರೋವರ್ಸ್–ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪೋಷಕರು

ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು

ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು

ಕೊಂಡಜ್ಜಿ ಬ. ಷಣ್ಮುಖಪ್ಪ

ಸಂಪಾದಕರು

ಕೆ. ಗಂಗಪ್ಪಗೌಡ

ಸಹಸಂಪಾದಕರು

ಎನ್. ಶ್ರೀನಿವಾಸನ್

ಸಂಚಾಲಕರು

ಬಿ.ಎಸ್. ರವೀಂದ್ರ

ಸದಸ್ಯರು

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.

ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

KARNATAKA Scout & Guide

MONTHLY NEWS MAGAZINE

Vol: 65 | Issue : 07 | July 2024

ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಸಂಪಾದಕೀಯ ...05

ಆಗಸ್ಟ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು ...06

ಎ.ಎಸ್.ಓ.ಸಿ., ಡಿ.ಓ., ಎಸ್.ಜಿ.ವಿ.ಗಳ ಕಾರ್ಯಗಾರ ...08

ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರ ...09

ಜಿಲ್ಲಾ ವಾರ್ತೆಗಳು ...12

ಶ್ರದ್ಧಾಂಜಲಿ ...29

ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು

ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಾಂಧವರಿಗೆ ಶುಭಾಶಯಗಳು

ಈ ಸಾಲಿನ ನಮ್ಮ ವಾರ್ಷಿಕ ಚಟುವಟಿಕೆಗಳು ನಮ್ಮ ಯೋಜನೆಯಂತೆ ಕ್ರಮಬದ್ಧವಾಗಿ ಆರಂಭವಾಗಿದ್ದು, ಜುಲೈ ತಿಂಗಳು ನಮ್ಮ ಚಳವಳಿಗೆ ಫಲಪ್ರದವಾಗಿದೆ ಎಂದು ಪರಿಭಾವಿಸಿದ್ದೇನೆ. ರಾಜ್ಯ ಸರ್ಕಾರ, ಶಿಕ್ಷಣ ಇಲಾಖೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಕ–ಶಿಕ್ಷಕಿಯರು ನಮ್ಮ ಚಳವಳಿಯ ಬೆನ್ನೆಲುಬುಗಳು. ಇದರ ಹಿನ್ನೆಲೆಯಲ್ಲಿ, ರಾಜ್ಯದ ವಿವಿಧ ಭಾಗಗಳಲ್ಲಿ ನಾವು ಆಯೋಜಿಸಿದ್ದ ವಿಭಾಗ ಮಟ್ಟದ ಸಮಾಲೋಚನಾ ಕಾರ್ಯಗಾರಗಳು, ಮೂಲ ತರಬೇತಿ ಶಿಬಿರಗಳು ಸ್ಕೌಟರ್–ಗೈಡರ್ ಸಮಾವೇಶಗಳು, ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಗಳು ಯಶಸ್ವಿಯಾಗಿವೆ. ಶಿಕ್ಷಣಾಧಿಕಾರಿಗಳ ಉತ್ಸಾಹಭರಿತ ಭಾಗವಹಿಸುವಿಕೆ, ಅವರ ಆಸಕ್ತಿ, ಸಲಹೆ, ಮಾರ್ಗದರ್ಶನಗಳು ನಮ್ಮ ಉದ್ದೇಶಗಳನ್ನು ಸಾಕಾರಗೊಳಿಸಿವೆ. ತರಬೇತಿ ಪಡೆದ ಎಲ್ಲ ಶಿಕ್ಷಕರುಗಳು ಸ್ಕೌಟ್–ಗೈಡ್ ದಳಗಳನ್ನು ಪ್ರಾರಂಭ ಮಾಡುವ ಆಶಾಭಾವನೆಯನ್ನು ನಾನು ಹೊಂದಿದ್ದೇನೆ. ಚಳವಳಿಯಲ್ಲಿ ತೊಡಗಿರುವ ಸ್ಕೌಟ್–ಗೈಡ್ ಸಂಸ್ಥೆಯ ಪ್ರತಿಯೊಬ್ಬ ಮುಖಂಡರು, ದಳನಾಯಕರು ತಮ್ಮ ಹೊಣೆಗಾರಿಕೆಯನ್ನು ಅರಿತು ಕೆಲಸ ಮಾಡಿದರೆ ಈ ರೀತಿಯ ಯಶಸ್ಸು ಸಾಧ್ಯ ಎಂಬುದನ್ನು ಇದು ತೋರಿಸಿಕೊಟ್ಟಿದೆ. ಪ್ರತಿಯೊಬ್ಬರಿಗೂ ನನ್ನ ಕೃತಜ್ಞತೆಗಳು.

ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ, ಅಲ್ಲಿನ ಪದಾಧಿಕಾರಿಗಳು, ದಳನಾಯಕರುಗಳು ಹಾಗೂ ಸ್ಥಳೀಯ ಮುಖಂಡರುಗಳೊಂದಿಗೆ ಚರ್ಚಿಸಿ, ಸಮಸ್ಯೆಗಳನ್ನು ಅರಿಯುವುದು ಮತ್ತು ಚಳವಳಿಯ ಬೆಳವಣಿಗೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಉದ್ದೇಶದೊಂದಿಗೆ, ಸಂಬಂಧಪಟ್ಟ ಜಿಲ್ಲಾ ಪದಾಧಿಕಾರಿಗಳೊಂದಿಗೆ ಪ್ರವಾಸ ಕೈಗೊಳ್ಳುವ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇನೆ. ಪ್ರಾರಂಭಿಕ ಹಂತವಾಗಿ ಬೆಂಗಳೂರು ಗ್ರಾಮಾಂತರ ಮತ್ತು ಪೂರ್ವ, ಕೋಲಾರ ಮತ್ತು ಉಡುಪಿ ಜಿಲ್ಲೆಗಳ ಕೆಲವು ಸ್ಥಳೀಯ ಸಂಸ್ಥೆಗಳಿಗೆ ಭೇಟಿ ಕೊಟ್ಟಾಗ ಆಗಿರುವ ಅನುಭವಗಳು ನನಗೆ ಮತ್ತಷ್ಟು ಕೆಲಸ ಮಾಡುವ ಚೈತನ್ಯ ಮೂಡಿಸಿವೆ. ಸ್ಥಳೀಯ ಸಂಸ್ಥೆಗಳು ಗಟ್ಟಿಯಾದಾಗ ಮಾತ್ರ ಚಳವಳಿಯ ಅಭೂತಪೂರ್ವ ಬೆಳವಣಿಗೆ ಸಾಧ್ಯ ಎಂಬ ವಾಸ್ತವಿಕ ಸತ್ಯದ ಅರಿವಾಗಿದೆ. ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಗಳ ಎಲ್ಲಾ ಪದಾಧಿಕಾರಿಗಳು ಈ ಕಾರ್ಯಕ್ರಮಕ್ಕೆ ಪುಷ್ಟಿ ನೀಡಬೇಕೆಂಬ ಕಳಕಳಿ ನನ್ನದು.

ರಾಜ್ಯದ ವಿವಿಧ ಭಾಗಗಳಲ್ಲಿ ನಮ್ಮ ಸಂಸ್ಥೆಯ ತರಬೇತಿ ಕೇಂದ್ರಗಳ ಅಭಿವೃದ್ಧಿ, ಕಟ್ಟಡಗಳ ನಿರ್ಮಾಣದಂಥ ಮೂಲಭೂತ ಸೌಕರ್ಯಗಳಿಗೆ ರಾಜ್ಯ ಸರ್ಕಾರ ಮತ್ತು ಜನಪ್ರತಿನಿಧಿಗಳು ನೀಡುತ್ತಿರುವ ಸಹಕಾರಕ್ಕೆ ನಮ್ಮ ಸಂಸ್ಥೆ ಆಭಾರಿಯಾಗಿದೆ. ಕೇಂದ್ರ ಕಛೇರಿ "ಶಾಂತಿಗೃಹ"ದ ಒಳಾಂಗಣ ರಸ್ತೆಗೆ ಬಿ.ಬಿ.ಎಂ.ಪಿ.ಯಿಂದ ಕಾಂಕ್ರೀಟ್ ಹಾಕಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ನಿಧಿಯಿಂದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಜಿಲ್ಲೆಗಳಲ್ಲಿ ನಮ್ಮ ಸಂಸ್ಥೆಗೆ ನಿರೀಕ್ಷೆಗೂ ಮೀರಿದ ಅನುದಾನ ಸಿಕ್ಕಿದೆ. ಇದಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ, KKRDಯ ಮಾನ್ಯ ಅಧ್ಯಕ್ಷರಾದ ಡಾ॥ ಅಜಯ್‌ಸಿಂಗ್ ಅವರಿಗೆ, ಮಾನ್ಯ ಸಚಿವರಾದ ಶ್ರೀ ಎನ್.ಎಸ್. ಬೋಸರಾಜು ಅವರಿಗೆ, ಮುಖ್ಯಮಂತ್ರಿಗಳ ಗೌರವ ಸಲಹೆಗಾರರಾದ ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ ಅವರಿಗೆ ಹಾಗೂ ಆ ಭಾಗದ ಎಲ್ಲಾ ಶಾಸಕರುಗಳಿಗೆ ನಾನು ಚಿರಋಣಿಯಾಗಿದ್ದೇನೆ. ಟಯೋಟಾ, ಐಟಿಸಿಯಂಥ ಪ್ರತಿಷ್ಠಿತ ಕಂಪನಿಗಳ ಸಿ.ಎಸ್.ಆರ್. ನಿಧಿಯಿಂದ ನಮ್ಮ ಸಂಸ್ಥೆಗೆ ಮೂಲಭೂತ ಸೌಕರ್ಯಗಳಿಗೆ ನೆರವು ನೀಡುವ ಭರವಸೆ ಸಿಕ್ಕಿದೆ. ಆ ಸಂಸ್ಥೆಗಳ ಮುಖ್ಯಸ್ಥರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಮ್ಮ ಮನವಿಗೆ ಸ್ಪಂದಿಸಿ, ಡಾ॥ ಅಜಯ್ ಸಿಂಗ್ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಕಲಬುರಗಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾಗಿರಲು ಒಪ್ಪಿರುವುದು ಮತ್ತು ಕಲಬುರಗಿಯ ಪ್ರತಿಷ್ಠಿತ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಪೂಜ್ಯ ಮಾತೃಶ್ರೀ ಡಾ॥ ದಾಕ್ಷಾಯಿಣಿ ಎಸ್. ಅಪ್ಪ ಅವರು ನಮ್ಮ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾಗಿರಲು ಒಪ್ಪಿರುವುದರಿಂದ ಈ ಚಳವಳಿಗೆ ಹೆಚ್ಚಿನ ಶಕ್ತಿ ಬಂದಿದೆ.

ಇನ್ನು ವಿಜಯಪುರದಲ್ಲಿ "ಕಿತ್ತೂರು ಕರ್ನಾಟಕ ಜಾಂಬೋರೇಟ್" ಹಾಗೂ ಚಿಕ್ಕಮಗಳೂರಿನಲ್ಲಿ "44ನೇ ಕಬ್ ಮತ್ತು ಬುಲ್‌ಬುಲ್ ಉತ್ಸವ"ಗಳ ಆಯೋಜನೆ ನಮ್ಮ ಸಂಸ್ಥೆಯ ಈ ಸಾಲಿನ ಮಹತ್ವಪೂರ್ಣ ಕಾರ್ಯಕ್ರಮಗಳಾಗಿವೆ. ಆ ಎರಡೂ ಕಾರ್ಯಕ್ರಮಗಳಿಗೆ ಜಿಲ್ಲಾಡಳಿತಗಳು ಸಹಕಾರ ನೀಡುತ್ತಿವೆ. ಸ್ಕೌಟ್–ಗೈಡ್ ಚಳವಳಿಯ ಈ ಮಕ್ಕಳ ಉತ್ಸವಗಳಿಗೆ ನಮ್ಮ ಎಲ್ಲಾ ಜಿಲ್ಲಾ ಸಂಸ್ಥೆಗಳ ಪಾಲ್ಗೊಳ್ಳುವಿಕೆಯನ್ನು ನಾನು ಅಪೇಕ್ಷಿಸುತ್ತೇನೆ.

ಸ್ಕೌಟ್ ಗೈಡ್ ಸಂಸ್ಥೆ ಮತ್ತು ಪೋಷಕರ ನಡುವಿನ ಸಂಬಂಧ ಅನನ್ಯವಾದುದು. ಇದರ ಹಿನ್ನೆಲೆಯಲ್ಲಿ ಈ ಬಾರಿಯ ಪೋಷಕರ ದಿನಾಚರಣೆಯನ್ನು ನಮ್ಮ ಮಕ್ಕಳು ವೈವಿಧ್ಯಮಯ, ಭಾವನಾತ್ಮಕ ಹಾಗೂ ಭಕ್ತಿಭಾವದೊಂದಿಗೆ ಆಚರಿಸಿದ್ದಾರೆ. ಕಾರ್ಗಿಲ್ ವಿಜಯೋತ್ಸವ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿ, ದೇಶಭಕ್ತಿಯನ್ನು ಮೆರೆದಿದ್ದಾರೆ. ವೆಬಿನಾರ್ ಮೂಲಕ ಆಯೋಜಿಸಿದ್ದ "ಮ್ಯಾಪಿಂಗ್" ಮುಂತಾದ ಕಾರ್ಯಕ್ರಮಗಳಲ್ಲಿ, ಜಿಲ್ಲಾ ಸಂಸ್ಥೆಗಳು ನಡೆಸಿರುವ ರಾಜ್ಯಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷೆಗಳಲ್ಲಿ ಉತ್ಸುಕರಾಗಿ ಪಾಲ್ಗೊಂಡ ಪ್ರತಿಯೊಬ್ಬ ಸ್ಕೌಟ್–ಗೈಡ್, ರೋವರ್–ರೇಂಜರ್‌ಗಳಿಗೆ ಹಾಗೂ ದಳನಾಯಕರಿಗೆ ನನ್ನ ಹಾರ್ದಿಕ ಶುಭಾಶಯಗಳು.

ಜುಲೈ 24ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ಹಾಗೂ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ ಕೇಂದ್ರ ಕಚೇರಿಯಲ್ಲಿ ಪರಿಸರ ಶಿಕ್ಷಣ ಕಾರ್ಯಕ್ರಮ ನಡೆಯಿತು. ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಪರಿಸರ ಕಾಳಜಿಯನ್ನು ಮೆಚ್ಚಿರುವ ಆ ಸಂಸ್ಥೆ, ಇನ್ನು ಮುಂದೆ ರಾಜ್ಯಾದ್ಯಂತ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ನಮ್ಮ ಸಹಯೋಗದೊಂದಿಗೆ ನಡೆಸಲು ಬಯಸಿದ್ದಾರೆ.

ತಾವು ನಿರ್ವಹಿಸಿರುವ ಎಲ್ಲಾ ಜವಾಬ್ದಾರಿ ಹುದ್ದೆಗಳಲ್ಲಿ ಸ್ಕೌಟ್–ಗೈಡ್ ಚಳವಳಿಗೆ ಅಭೂತಪೂರ್ವ ಪ್ರೋತ್ಸಾಹ ನೀಡುತ್ತಾ ಬಂದಿರುವ ಹಿರಿಯ ಹಾಗೂ ದಕ್ಷ ಐ.ಎ.ಎಸ್. ಅಧಿಕಾರಿಗಳಾದ ಡಾ॥ ಶಾಲಿನಿ ರಜನೀಶ್ ಅವರು ಕರ್ನಾಟಕ ಸರ್ಕಾರದ ನೂತನ ಮುಖ್ಯಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ. ಅವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳೊಂದಿಗೆ ಶುಭ ಹಾರೈಸುತ್ತೇನೆ.

ರಾಜ್ಯದಲ್ಲಿ ಮುಂಗಾರು ಮಳೆ ಬಿರುಸು ಪಡೆದಿದೆ. ಭಾರಿ ಮಳೆಯಿಂದಾಗಿ ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಕೆಲವು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್‌ಗಳು ಸೇವೆಯಲ್ಲಿ ತೊಡಗಿದ್ದಾರೆ. ಅವರೆಲ್ಲರೂ ಎಚ್ಚರಿಕೆಯಿಂದ ಕಾರ್ಯವಹಿಸಬೇಕೆಂಬ ಕಳಕಳಿ ನನ್ನದು.

ದೇಶಕ್ಕೆ ಈಗ 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ. ಅನೇಕ ಮಹನೀಯರುಗಳ ತ್ಯಾಗ–ಬಲಿದಾನಗಳ ಪ್ರತೀಕವಾಗಿರುವ ಆ ದಿನವನ್ನು ನಾವೆಲ್ಲರೂ ಅರ್ಥಪೂರ್ಣವಾಗಿ ಆಚರಿಸೋಣ. ಬೆಂಗಳೂರು ನಗರದ ಜೊತೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಎಂದಿನಂತೆ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗುತ್ತದೆ. ಸಿಕ್ಕ ಅವಕಾಶಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳಿ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜೆ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಸಂಪಾದಕೀಯ

ಮಾನ್ಯರೆ,

ಶಾಲೆ ಮತ್ತು ಮನೆ ಇವೆರಡೂ ಪೂರೈಸದ ಅಗತ್ಯಗಳನ್ನು ಸ್ಕೌಟ್ಸ್–ಗೈಡ್ಸ್ ಶಿಕ್ಷಣವು ಯುವಜನಾಂಗಕ್ಕೆ ಪೂರೈಸುವಲ್ಲಿ ಪರಿಣಾಮಕಾರಿಯಾಗಿದೆ. ಇದನ್ನು ಅನುಷ್ಠಾನಗೊಳಿಸುವಲ್ಲಿ ದಳನಾಯಕರುಗಳಾದ ಶಾಲಾ–ಕಾಲೇಜುಗಳ ಶಿಕ್ಷಕ–ಶಿಕ್ಷಕಿಯರುಗಳ, ಉಪನ್ಯಾಸಕರುಗಳ ಪಾತ್ರ ಅಪಾರ. ದಳನಾಯಕರುಗಳ ಕೌಶಲ್ಯ ಭರಿತ, ಪ್ರೇರಣಾತ್ಮಕ, ಅಭಿಮಾನಪೂರ್ವಕ, ಮಾರ್ಗದರ್ಶನ, ಕಾರ್ಯಕ್ರಮಗಳು, ಚಟುವಟಿಕೆಗಳು ಯುವಜನಾಂಗದಲ್ಲಿ ಉತ್ತಮ ಹುಮ್ಮಸ್ಸನ್ನು ನೀಡಿ, ಅವರುಗಳು ಗುಣಾತ್ಮಕ ಶಿಕ್ಷಣ ಹೊಂದಿ, ಮುಂದೆ ಸತ್ಪ್ರಜೆಗಳಾಗುವಲ್ಲಿ ಪ್ರೇರೇಪಿಸುವುದು ಎಂಬುದರಲ್ಲಿ ಸಂಶಯವಿಲ್ಲ.

"ಸಂತೋಷವು ಹೊಂದಿರುವ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಿಂತ ಮಿಗಿಲಾಗಿ ಅವುಗಳನ್ನು ಹೆಚ್ಚು ಕ್ರಿಯಾತ್ಮಕವಾಗಿ ನಿರ್ವಹಿಸುವಲ್ಲಿ ಅಡಗಿದೆ" (Joy is there more in creating, not in maintaining only) ಎಂಬುದನ್ನು ಅರ್ಥೈಸಿಕೊಂಡು ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್‌ನ ದಳನಾಯಕರುಗಳು ತಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಶ್ರಮಿಸುತ್ತಿರುವುದು ಹರ್ಷದಾಯಕ.

ತಮ್ಮ ವಿದ್ಯಾರ್ಥಿಗಳು ಜವಾಬ್ದಾರಿಯುತ ಪ್ರಜೆಗಳಾಗಿ, ಅವರಲ್ಲಿ ಅಡಗಿರುವ ಶಾರೀರಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಹಾಗೂ ಪಾರಮಾರ್ಥಿಕ ಚೈತನ್ಯಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಉದ್ದೇಶಗಳು ಸಾಫಲ್ಯ ಆಗುವಲ್ಲಿ ಎಲ್ಲಾ ದಳನಾಯಕರುಗಳ ಕಾಯಾ–ವಾಚಾ–ಮನಸಾ ಶ್ರಮ ಅತ್ಯಗತ್ಯ.

ಜೊತೆಗೆ ಹೆಚ್ಚು–ಹೆಚ್ಚು ವಿದ್ಯಾರ್ಥಿಗಳು (ಯುವಜನತೆ) ಸ್ಕೌಟ್ಸ್–ಗೈಡ್ಸ್ ಚಳವಳಿಯಲ್ಲಿ ಭಾಗವಹಿಸಿ, ಸತ್ಪ್ರಜೆಗಳಾಗುವಲ್ಲಿ ಪ್ರೇರಕವಾಗಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಾಲಾ–ಕಾಲೇಜುಗಳ ಮುಖ್ಯಸ್ಥರು, ಪುರಪ್ರಮುಖರು, ಪೋಷಕವೃಂದ, ಪ್ರಜಾಪ್ರತಿನಿಧಿಗಳೆಲ್ಲರೂ ಪ್ರೋತ್ಸಾಹಿಸುತ್ತಿರುವುದು ಸ್ವಾಗತಾರ್ಹ. ಇದನ್ನು ಮನಗಂಡು ನಮ್ಮ ಶಾಲಾ–ಕಾಲೇಜುಗಳ ದಳನಾಯಕರುಗಳು, ಶಿಕ್ಷಕ–ಶಿಕ್ಷಕಿಯರು, ಉಪನ್ಯಾಸಕರುಗಳು ರಾಜ್ಯ ಸಂಸ್ಥೆಯು ಏರ್ಪಡಿಸುವ ಮೂಲತರಬೇತಿ ಶಿಬಿರಗಳಲ್ಲಿ, ಇತರೆ ತರಬೇತಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ–ತಮ್ಮ ಸಂಸ್ಥೆಗಳಲ್ಲಿ ದಳಗಳನ್ನು ತಕ್ಷಣ ಪ್ರಾರಂಭಿಸಿ, ನಿರ್ವಹಿಸಲು ಆದ್ಯಕ್ರಮಕೈಗೊಳ್ಳಲು ವಿನಂತಿಸಿದೆ.

ಈಗಾಗಲೇ ಪ್ರಾರಂಭವಾಗಿರುವ ದಳಗಳವರು ತಮ್ಮ ದಳಗಳನ್ನು ನವೀಕರಿಸಿಕೊಂಡು, ನೋಂದಾವಣೆಯನ್ನು ಹೆಚ್ಚಿಸಿ, ವಿದ್ಯಾರ್ಥಿಗಳ ಪ್ರಗತಿಪರ ಹಾಗೂ ಉತ್ತೇಜಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾ, ಅವರುಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲು ವಿನಂತಿಸುತ್ತೇನೆ.

ತಮ್ಮ ಜವಾಬ್ದಾರಿಯುತ ಸ್ಕೌಟ್ಸ್–ಗೈಡ್ಸ್ ದಳನಾಯಕ ವೃತ್ತಿಯು ವಿದ್ಯಾರ್ಥಿಗಳ ಮೇಲೆ ಅವರ್ಣನೀಯ ಪ್ರಭಾವ ಹೊಂದಿರುವುದನ್ನು ಮನಗಂಡು, ಯಾವುದೇ ರೀತಿಯ ಅಳುಕಿಗೆ ಎಡೆಗೊಡದೆ ನಿರ್ವಹಿಸುವುದು ತಮ್ಮ ವ್ಯಕ್ತಿತ್ವಕ್ಕೆ ಕಳಸಪ್ರಾಯವಾಗುವುದನ್ನು ಈ ಮೂಲಕ ತಿಳಿಸಬಯಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳ ಅನುಷ್ಠಾನ, ಹಾಗೆ ಅನುಷ್ಠಾನಗೊಳಿಸುವಲ್ಲಿ ನೀತಿ–ನಿಯಮಗಳು, ವಿಧಾನಗಳು, ವಿದ್ಯಾರ್ಥಿಗಳ ಮೇಲೆ, ತನ್ಮೂಲಕ ಸರ್ವರಮೇಲೆ ಅಪಾರ ಪರಿಣಾಮಗಳನ್ನು ಉಂಟುಮಾಡಲಿದ್ದು ಶಿಸ್ತುಬದ್ಧ ಬದುಕಿಗೆ ಕಾರಣ ಆಗುವುದನ್ನು ಮನಗಾಣಬಹುದಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳು ಸ್ಕೌಟ್ಸ್–ಗೈಡ್ಸ್ ಚಳವಳಿಯಲ್ಲಿ ಭಾಗವಹಿಸುವವರೆಲ್ಲರ ವ್ಯಕ್ತಿತ್ವ ವೃದ್ಧಿಯಾಗುವಲ್ಲಿ ಸಂಶಯವಿಲ್ಲ.

"ಒಳ್ಳೆಯ ಆತ್ಮಗಳವರನ್ನು ಅಭಿವೃದ್ಧಿ ಮಾಡಿದರೆ ಮಾತ್ರ ಕ್ರೌರ್ಯವನ್ನು ತಡೆಗಟ್ಟಬಹುದು" (To End Violence, We need to Develop Good Conscience People) ಎಂಬುದನ್ನು ಮನಗಂಡು ಉತ್ತಮ ಜನಾಂಗವನ್ನು ಹೊಂದುವಲ್ಲಿ ಸ್ಕೌಟ್ಸ್–ಗೈಡ್ಸ್ ಚಳವಳಿಯನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸುವಲ್ಲಿ ನಾವೆಲ್ಲರೂ ಕಾಯಾ, ವಾಚಾ, ಮನಸಾ ಶ್ರಮಿಸೋಣ ಎಂದು ಆಶಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಆಗಸ್ಟ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು

ಕ್ರ.ಸಂ	ದಿನಾಂಕ	ಸ್ಥಳ	ಕಾರ್ಯಕ್ರಮಗಳ ವಿವರಗಳು
1.	01.08.2024	ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ	ಸ್ಕಾರ್ಫ್ ದಿನಾಚರಣೆ/ಸುರ್ಯೋದಯ ದಿನಾಚರಣೆ
2.	09.08.2024	ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ	ಅಂತರರಾಷ್ಟ್ರೀಯ ಬುಡಕಟ್ಟು ದಿನಾಚರಣೆ
3.	15.08.2024	ದಳ, ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ	ಸ್ವಾತಂತ್ರ್ಯ ದಿನಾಚರಣೆ
4.	16.08.2024	ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ	ಪಿ.ವಿ. ದೀನದಯಾಳುನಾಯ್ಡು ಜನ್ಮ ದಿನಾಚರಣೆ
5.	20.08.2024	ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ	ಸದ್ಭಾವನಾ ದಿನಾಚರಣೆ
6.	ನಿಗದಿ ಪಡಿಸಲಾಗುವುದು	ಬೆಳಗಾವಿ	ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರ
7	ಆಗಸ್ಟ್ ಕೊನೆಯ ವಾರ	ಆನ್‌ಲೈನ್ ಮೂಲಕ	ಆನ್‌ಲೈನ್ ರಾಜ್ಯ ಪುರಸ್ಕಾರ ಲಿಖಿತ ಪರೀಕ್ಷೆ
8.	ಶನಿವಾರ ಮತ್ತು ಭಾನುವಾರಗಳಂದು	ಆನ್‌ಲೈನ್ ಮೂಲಕ	ಪ್ರಾವೀಣ್ಯತಾ ಪದಕಗಳ ಆನ್‌ಲೈನ್ ತರಬೇತಿ

Congratulations

To

M.A. KHALID

State Commissioner (Scout), Karnataka
& Additional Chief National Commissioner
Bharat Scouts & Guides, INDIA

M.A. Khalid, State Commissioner(S), Karnataka and Additional Chief National Commissioner Bharath Scouts & Guides, INDIA receiving the Scouts of Taiwan's Highest Scouting Award from the President of Taiwan His Excellency **Lai Ching-Te**

M.A. Khalid, State Commissioner(S), Karnatka receiving the Highest Award of Malaysia Scouting from the King His Excellency Paduka Ser Sultan Perak Darul Ridzuan, **Sultan Nazrin Muizzuddin Shah.**

ಎ.ಎಸ್.ಓ.ಸಿ., ಡಿ.ಓ., ಎಸ್.ಜಿ.ವಿ.ಗಳ ಕಾರ್ಯಗಾರ

ಜೂನ್ 06 ರಿಂದ 09ರ ವರೆಗೆ ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ, ಬೆಂಗಳೂರು ಇಲ್ಲಿ ಎ.ಎಸ್.ಓ.ಸಿ. ಡಿ.ಓ., ಎಸ್.ಜಿ.ವಿ., ಎಸ್.ಜಿ.ಎ.ಗಳಿಗೆ 4 ದಿನಗಳ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಜೂನ್ 06 ರಂದು ಬೆಳಗ್ಗೆ 9 ಗಂಟೆಗೆ ಕಾರ್ಯಾಗಾರದ ಅಧ್ಯಕ್ಷರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜೆ.ಆರ್. ಸಿಂಧ್ಯ ಇವರು ದೀಪ ಬೆಳಗಿಸುವ ಮೂಲಕ ಕಾರ್ಯಗಾರವನ್ನು ಉದ್ಘಾಟಿಸಿ ಸಂಘಟಕರುಗಳಿಗೆ ಶುಭವನ್ನು ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀ ಕೆ. ಸುಕುಮಾರ್, ರಾಷ್ಟ್ರೀಯ ಆಯುಕ್ತರು (ವ.ಸಂ.) ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್), ಶ್ರೀಮತಿ ಬಿ.ವಿ. ರಾಮಲತಾ ರಾಜ್ಯ ಆಯುಕ್ತರು (ಗೈ), ವಯಸ್ಕ ಸಂಪನ್ಮೂಲ, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸಂಘಟಕರುಗಳಿಗೆ ಜಿಲ್ಲೆಗಳಲ್ಲಿ ಅತ್ಯವಶ್ಯವಾಗಿ ಅಗತ್ಯವಿರುವ ಹಾಗೂ ಉತ್ಸಾಹ ಮತ್ತು ಹುಮ್ಮಸ್ಸಿನಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೆಚ್ಚಿಸುವಂತಹ ವಿಷಯಗಳನ್ನು ಬೋಧಿಸಲಾಯಿತು. ಶಿಸ್ತು ಮತ್ತು ಸಮವಸ್ತ್ರ, ಹಣಕಾಸು ಮತ್ತು ಆಡಿಟ್ ವರದಿ, ಆಸ್ತಿಯ ದಾಖಲಾತಿಗಳು, ಟ್ರಸ್ಟ್ ರಚನೆ. ಸಾರ್ವಜನಿಕ ಸಂಪರ್ಕ ಮತ್ತು ಸಂಬಂಧ, ನಾಯಕತ್ವ, ವಿವಿಧ ಪರೀಕ್ಷೆಗಳ ಮಾಹಿತಿ, ಬಲಿಷ್ಠ ತರಬೇತಿ ತಂಡದ ರಚನೆ, ಮಾನವೀಯ ಸಂಬಂಧಗಳು, ಸಮುದಾಯ ಅಭಿವೃದ್ಧಿ ಮತ್ತು ಸೇವೆ, Event Management. ಯೋಜನೆ ಮತ್ತು ಕಾರ್ಯಗತ ವರದಿ ಸಿದ್ಧಪಡಿಸುವ ಬಗ್ಗೆ ವಯಸ್ಕ ನಾಯಕರಲ್ಲಿ ಸೈಟಿಂಗ್, ರೋವರ್–ರೇಂಜರಿಂಗ್ ಅಭಿವೃದ್ಧಿ, SWOT, ವಿಶ್ಲೇಷಣೆ, ಸುಸ್ಥಿರ ಗುರಿಗಳು ಮತ್ತು ಮಾಹಿತಿ, WOSM B WAGGGS, ಕಾರ್ಯಕ್ರಮ ಮತ್ತು ಚಟುವಟಿಕೆಗಳು, ಮೌಲ್ಯಮಾಪನ, ಸಂಘಟಕರುಗಳ ಸಮಸ್ಯೆಗಳೇನು. ಗುಣಾತ್ಮಕ ಮತ್ತು ಗಣಾತ್ಮಕ ಅಭಿವೃದ್ಧಿ ಇತರೆ ಸಂಘ ಸಂಸ್ಥೆಗಳೊಂದಿಗೆ ಸಹಯೋಗ, 2024–25ನೇ ಸಾಲಿನ ಯೋಜನೆ, ಸಂಘಟಕರುಗಳ ವೈಯಕ್ತಿಕ ಸಾಧನೆ. ಗಣತಿಯ ಗುರಿ ಇತ್ಯಾದಿಗಳನ್ನು ಪಿ.ಪಿ.ಟಿ ಪ್ರಾತ್ಯಕ್ಷತೆ ಮೂಲಕ ಅತ್ಯುತ್ತಮವಾಗಿ ಬೋಧಿಸಿ ಸಂವಾದದ ಮೂಲಕ ಚರ್ಚಿಸಲಾಯಿತು.

ಶ್ರೀ ಅಮರ್ ಬಿ. ಛತ್ರಿ, ಜಂಟಿ ನಿರ್ದೇಶಕರು (ಸೌ), ರಾಷ್ಟ್ರೀಯ ಸಂಸ್ಥೆ, ನವದೆಹಲಿ, ಶ್ರೀ ಕೆ. ಸುಕುಮಾರ್, ರಾಷ್ಟ್ರೀಯ ಆಯುಕ್ತರು ವಯಸ್ಕ ಸಂಪನ್ಮೂಲ, ನವದೆಹಲಿ, ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸೌ), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ಸೌ) ವಯಸ್ಕ ಸಂಪನ್ಮೂಲ, ಶ್ರೀಮತಿ ಬಿ.ಎ. ರಾಮಲತಾ, ರಾಜ್ಯ ಆಯುಕ್ತರು (ಗೈ) ವಯಸ್ಕ ಸಂಪನ್ಮೂಲ, ಶ್ರೀ ಎನ್ ಶ್ರೀನಿವಾಸನ್ ಸಹಾಯಕ ರಾಜ್ಯ ಆಯುಕ್ತರು (ಸೌ), ಶ್ರೀಮತಿ ಮುಕ್ತ ಬಿ. ಕಾಗಲಿ, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು, ಶ್ರೀ ಶಶಾಂಕ್ ದ್ವಾರಕನಾಥ್, ರೋವರ್, ಬೆಂಗಳೂರು ದಕ್ಷಿಣ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ. ಹಾಗೂ ರೇಂಜರಿಂಗ್ ಇನ್‌ಚಾರ್ಜ್, ಶ್ರೀಮತಿ ಕುಮಾರಿ ಹೊನ್ನಮ್ಮ, ಎ.ಎಸ್.ಓ.ಸಿ ಹಾಗೂ ಪರೀಕ್ಷಾ ವಿಭಾಗದ ಮೇಲ್ವಿಚಾರಕರು ಮತ್ತು ರಾಜ್ಯ ಸಂಘಟನಾ ಆಯುಕ್ತರುಗಳು ಹಾಗೂ ರಾಜ್ಯ ತರಬೇತಿ ಆಯುಕ್ತರುಗಳು ಉಪನ್ಯಾಸವನ್ನು ನೀಡಿದರು.

ರಾಜ್ಯ ಮುಖ್ಯ ಆಯುಕ್ತರು ಪ್ರತಿ ಸಂಘಟಕರೊಂದಿಗೆ ಸಂವಾದಿಸಿದರು ಮತ್ತು ಅವರುಗಳ ಪ್ರಗತಿಯನ್ನು ಶ್ಲಾಘಿಸಿ ಅಭಿನಂದಿಸಿದರು. ಜೊತೆಗೆ ಪ್ರಗತಿ ಕಡಿಮೆ ಇರುವ ಜಿಲ್ಲೆಗಳಿಗೆ ಉತ್ತಮ ಮಾರ್ಗದರ್ಶನವನ್ನು ನೀಡಿದರು. 2023–24ನೇ ಸಾಲಿನಲ್ಲಿ ಫಲಪ್ರದವಾಗಿ ಉತ್ತಮ ಫಲಿತಾಂಶ ದೊರಕಿದೆ. ಅದೇ ರೀತಿ 2024–25ನೇ ಸಾಲಿನಲ್ಲಿ ಅತ್ಯುತ್ತಮ ಚಟುವಟಿಕೆ ಮತ್ತು ತರಬೇತಿಗಳನ್ನು ಸಂಘಟಿಸೋಣ. ಎಲ್ಲರೂ ಸಹಕಾರ ನೀಡಿ ಎಂದು ತಿಳಿಸಿ ಶುಭ ಹಾರೈಸಿದರು.

"ರಾಜ್ಯ ಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರ"

ರಾಜ್ಯ ಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ತರಬೇತಿ ದಿನಾಂಕ	ತರಬೇತಿ ಸ್ಥಳ	ಭಾಗವಹಿಸುವ ಜಿಲ್ಲೆಗಳು	ಗೈಡ್ ವಿಭಾಗದ ನಾಯಕರು	ಸ್ಕೌಟ್ ವಿಭಾಗದ ನಾಯಕರು
1	24.06.2024 ರಿಂದ 30.06.2024	ಕೊಂಡಜ್ಜಿ ಬಸಪ್ಪ ಸ್ಕೌಟ್ & ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ	ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಧಾರವಾಡ, ಹಾವೇರಿ, ಬೆಳಗಾವಿ	**ಫ್ಲಾಕ್ ವಿಭಾಗಕ್ಕೆ–** ಶ್ರೀಮತಿ ಮೀನಾಕ್ಷಮ್ಮ ಎ.ಎಲ್.ಟಿ(ಬಿ) **ಗೈಡ್ ವಿಭಾಗಕ್ಕೆ–** ಶ್ರೀಮತಿ ಶಶಿಕಲಾ ಎಲ್.ಟಿ(ಗೈ)	**ಕಬ್ ವಿಭಾಗಕ್ಕೆ –** ಶ್ರೀ ಆಂಜನೆಯ್ಯ ಎ.ಎಲ್.ಟಿ(ಕಬ್) **ಸ್ಕೌಟ್ ವಿಭಾಗಕ್ಕೆ–** ಶ್ರೀ ಅಮರೇಶ್ ಕೋರಿ ಎಲ್.ಟಿ(ಸ್ಕೌಟ್)
2	24.06.2024 ರಿಂದ 30.06.2024	ಕೊಪ್ಪಳ– ಜಿಲ್ಲಾ ತರಬೇತಿ ಕೇಂದ್ರ ಗುನ್ನಾಳಿ, ಕೊಪ್ಪಳ ಜಿಲ್ಲೆ	ಕೊಪ್ಪಳ, ಬಳ್ಳಾರಿ, ಗದಗ, ವಿಜಯನಗರ, ರಾಯಚೂರು	**ಫ್ಲಾಕ್ ವಿಭಾಗಕ್ಕೆ–** ಶ್ರೀಮತಿ ಉಷಾಬಾಯಿ ಎ.ಎಲ್.ಟಿ (ಬಿ), ರಾಯಚೂರು **ಗೈಡ್ ವಿಭಾಗಕ್ಕೆ–** ಶ್ರೀಮತಿ ಸೀಮಾ ರೆಡ್ಡಿ ಎ.ಎಲ್.ಟಿ(ಗೈ), ರಾಯಚೂರು	**ಕಬ್ ವಿಭಾಗಕ್ಕೆ –** ಶ್ರೀ ಜಿ. ಮುನಿನಾರಾಯಣಪ್ಪ ಎಲ್.ಟಿ(ಕಬ್) **ಸ್ಕೌಟ್ ವಿಭಾಗಕ್ಕೆ –** ಶ್ರೀ ಶಶಿಕಾಂತ್ ರಾವ್ ದೇಸಾಯಿ ಎಲ್.ಟಿ(ಸ್ಕೌಟ್)
3	24.06.2024 ರಿಂದ 30.06.2024	ವಿಜಯಪುರ– ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ ಬುರಣಾಪುರ, ವಿಜಯಪುರ ಜಿಲ್ಲೆ	ಬಾಗಲಕೋಟೆ, ವಿಜಯಪುರ, ಬೆಳಗಾವಿ (ಚಿಕ್ಕೋಡಿ)	**ಗೈಡ್ ವಿಭಾಗಕ್ಕೆ–** ಶ್ರೀಮತಿ ಲಕ್ಷ್ಮೀ.ಎಸ್. ಬಹದ್ದೂರಿ ಎ.ಎಲ್.ಟಿ(ಗೈ), ಬೆಳಗಾವಿ	**ಕಬ್ ವಿಭಾಗಕ್ಕೆ –** ಶ್ರೀಮತಿ ಚೇತನಾ ಪಾಟೀಲ್ ಎ.ಎಲ್.ಟಿ(ಕಬ್) **ಸ್ಕೌಟ್ ವಿಭಾಗಕ್ಕೆ–** ಶ್ರೀ ಜಗದೀಶ್ ಬೋಳಸೂರು ಎ.ಎಲ್.ಟಿ(ಸ್ಕೌಟ್)
4	24.06.2024 ರಿಂದ 30.06.2024	ಉಡುಪಿ– ಡಾ. ವಿ.ಎಸ್.ಆಚಾರ್ಯ, ಜಿಲ್ಲಾ ತರಬೇತಿ ಕೇಂದ್ರ, ಉಡುಪಿ ಜಿಲ್ಲೆ	ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿರಸಿ, ಕಾರವಾರ	**ಗೈಡ್ ವಿಭಾಗಕ್ಕೆ–** ಶ್ರೀಮತಿ ವನಿತಾ ರಾವ್ ಎಲ್.ಟಿ(ಗೈ) ಉಡುಪಿ	**ಕಬ್ ವಿಭಾಗಕ್ಕೆ –** ಶ್ರೀ ಎಸ್.ಎಸ್. ಹುಸೇನಿ ಎ.ಎಲ್.ಟಿ(ಕಬ್) **ಸ್ಕೌಟ್ ವಿಭಾಗಕ್ಕೆ–** ಶ್ರೀ ಬಿ ಆನಂದ ಅಡಿಗ ಎಲ್.ಟಿ(ಸ್ಕೌಟ್)
5	24.06.2024 ರಿಂದ 30.06.2024	ದೊಡ್ಡಬಳ್ಳಾಪುರ– ಡಾ.ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ	ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಗ್ರಾಮಾಂತರ, ಬಿಬಿಎಮ್‌ಪಿ, ಮೈಸೂರು, ಮಂಡ್ಯ ರಾಮನಗರ, ಕೋಲಾರ, ಮಧುಗಿರಿ, ತುಮಕೂರು ಚಿಕ್ಕಬಳ್ಳಾಪುರ, ಬೀದರ್, ಯಾದಗಿರಿ, ಕಲಬುರ್ಗಿ	**ಗೈಡ್ ವಿಭಾಗಕ್ಕೆ–** ಶ್ರೀಮತಿ ಗೀತಾ ನಟರಾಜ್ ಎಲ್.ಟಿ(ಗೈ) ಶ್ರೀಮತಿ ಕುಸುಮ ಫ್ರಿ–ಎ.ಎಲ್.ಟಿ, ಶ್ರೀಮತಿ ಶಶಿಕಲಾ ಫ್ರಿ–ಎ.ಎಲ್.ಟಿ	**ಕಬ್ ವಿಭಾಗಕ್ಕೆ –** ಶ್ರೀಮತಿ ಸಿ. ಸಂಧ್ಯಾರಾಣಿ ಎಲ್.ಟಿ(ಕಬ್) **ಸ್ಕೌಟ್ ವಿಭಾಗಕ್ಕೆ–** ಶ್ರೀಮತಿ ಹೇಮಲತಾ ಎ.ಎಲ್.ಟಿ(ಸ್ಕೌಟ್)

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ದೊಡ್ಡಬಳ್ಳಾಪುರ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ, ಯುವಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರು.

ದೊಡ್ಡಬಳ್ಳಾಪುರ ತರಬೇತಿ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ.ಎಸ್ ರೆಡ್ಡಿ, ಎಲ್.ಟಿ(ಎಸ್), ರಾಜ್ಯ ಆಯುಕ್ತರು (ವ.ಸಂ.), ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌಟ್), ಸಹಾಯಕ ರಾಜ್ಯ ಆಯುಕ್ತರು, ಶ್ರೀಮತಿ ಬಿ.ವಿ ರಾಮಲತಾ, ಎಲ್.ಟಿ. (ರೇಂಜರ್) ರಾಜ್ಯ ಆಯುಕ್ತರು (ಗೈಡ್) (ವ.ಸಂ), ಶ್ರೀಮತಿ ಅಶ್ವಿನಿ, ರೇಂಜರ್ ಲೀಡರ್‌ರವರು ತರಬೇತಿ ಶಿಬಿರಕ್ಕೆ ಭೇಟಿ ನೀಡಿದರು. ಕೊಂಡಜ್ಜಿ ತರಬೇತಿ ಶಿಬಿರಕ್ಕೆ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಉಪಾಧ್ಯಕ್ಷರು, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಸಹಾಯಕ ರಾಜ್ಯ ಆಯುಕ್ತರು ಭೇಟಿ ನೀಡಿದರು. ಕೊಪ್ಪಳ ತರಬೇತಿ ಶಿಬಿರಕ್ಕೆ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಒ.ಸಿ, ಕಲ್ಯಾಣ ಕರ್ನಾಟಕ ಮತ್ತು ರೇಂಜರಿಂಗ್ ಇನ್‌ಚಾರ್ಜ್ ಭೇಟಿ ನೀಡಿದರು. ತರಬೇತಿಗಳನ್ನು ತರಬೇತುದಾರರು ಮತ್ತು ಸಹನಾಯಕಿಯರ ಸಹಕಾರದೊಂದಿಗೆ SOT (Scheme of Training) ಪ್ರಕಾರ 7 ದಿನಗಳ ತರಬೇತಿಯನ್ನು ನೀಡಲಾಯಿತು.

ಜೂನ್ 30 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಮೇಲ್ಕಂಡ ತರಬೇತಿಗಳ ಸಂಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ(ಎಸ್), ಎಸ್.ಟಿ.ಸಿ(ಎಸ್) ಮತ್ತು ಶ್ರೀಮತಿ ಕೆ.ವಿ ಶಾಮಲ, ಎಲ್.ಟಿ(ಗೈ), ಎಸ್.ಟಿ.ಸಿ(ಗೈ) ರವರು ವಹಿಸಿದ್ದರು.

ಕೊಂಡಜ್ಜಿ ತರಬೇತಿ ಶಿಬಿರ – ಸ್ಕೌಟ್ ಮಾಸ್ಟರ್ಸ್

ಕೊಂಡಜ್ಜಿ ತರಬೇತಿ ಶಿಬಿರ – ಗೈಡ್ ಕಾಪ್ಟನ್ಸ್

ಕೊಂಡಜ್ಜಿ ತರಬೇತಿ ಶಿಬಿರ – ಕಬ್ ವಿಭಾಗ

ಕೊಂಡಜ್ಜಿ ತರಬೇತಿ ಶಿಬಿರ – ಬುಲ್‌ಬುಲ್ ವಿಭಾಗ

ಕೊಪ್ಪಳ ತರಬೇತಿ ಶಿಬಿರ – ಕಬ್ ವಿಭಾಗ

ಕೊಪ್ಪಳ ತರಬೇತಿ ಶಿಬಿರ – ಬುಲ್‌ಬುಲ್ ವಿಭಾಗ

ಕೊಪ್ಪಳ ತರಬೇತಿ ಶಿಬಿರ – ಗೈಡ್ ಕಾಪ್ಟನ್ಸ್

ಕೊಪ್ಪಳ ತರಬೇತಿ ಶಿಬಿರ – ಸ್ಕೌಟ್ ಮಾಸ್ಟರ್ಸ್

ವಿಜಯಪುರ ತರಬೇತಿ ಶಿಬಿರ – ಗೈಡ್ ಕ್ಯಾಪ್ಟನ್ಸ್

ವಿಜಯಪುರ ತರಬೇತಿ ಶಿಬಿರ – ಕಬ್, ಸ್ಕೌಟ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್

ಉಡುಪಿ ತರಬೇತಿ ಶಿಬಿರ – ಸ್ಕೌಟ್ ಮತ್ತು ಗೈಡ್

ಉಡುಪಿ ತರಬೇತಿ ಶಿಬಿರ – ಕಬ್ ವಿಭಾಗ

ದೊಡ್ಡಬಳ್ಳಾಪುರ ತರಬೇತಿ ಶಿಬಿರ – ಕಬ್ ವಿಭಾಗ

ದೊಡ್ಡಬಳ್ಳಾಪುರ ತರಬೇತಿ ಶಿಬಿರ – ಸ್ಕೌಟ್ ವಿಭಾಗ

ದೊಡ್ಡಬಳ್ಳಾಪುರ ತರಬೇತಿ ಶಿಬಿರ – ಗೈಡ್ ವಿಭಾಗ

ದೊಡ್ಡಬಳ್ಳಾಪುರ ತರಬೇತಿ ಶಿಬಿರ – ಫ್ಲಾಕ್ ಲೀಡರ್

ಜಿಲ್ಲಾ ವಾರ್ತೆಗಳು

ಬಾಗಲಕೋಟೆ

* ಜುಲೈ 05 ರಿಂದ 06ರ ವರೆಗೆ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಮತ್ತು ರಾಜ್ಯ ಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರವನ್ನು ಶ್ರೀ ಸಿದ್ಧಾರೂಢ ಮಠ ಬೆಳಗವಿ ತಾಲ್ಲೂಕು ಮುಧೋಳ ಇಲ್ಲಿ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ಶ್ರೀಮತಿ ಶಿವಶರಣೆ ಕಾಶಿಬಾಯಿ ಪುರಾಣಿಕ ಅವರು "ಸ್ಕೌಟ್–ಗೈಡ್ ತರಬೇತಿ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿದೆ" ಎಂದು ತಿಳಿಸಿದರು. ಅತಿಥಿಗಳಾಗಿ ಸಿದ್ಧಾರೂಢ ಆಶ್ರಮದ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಪುರಾಣಿಕ, ಶ್ರೀ ಕುಂಬಾರ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ಆರ್.ಡಿ. ಗಲಗಲಿ, ಕ್ಷೇತ್ರ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್.ಎಂ. ಕುರಟಿ, ಶಿಬಿರದ ಸ್ಕೌಟ್ ನಾಯಕರಾಗಿ ಶ್ರೀ ಎಂ.ಬಿ. ಹಿಡಕಲ್, ಗೈಡ್ಸ್ ನಾಯಕಿಯರಾಗಿ ಶ್ರೀಮತಿ ಶೋಭಾದಾಸರ ಹಾಗೂ ವಿವಿಧ ಶಾಲೆಗಳ ಸ್ಕೌಟ್ ಮಾಸ್ಟರ್, ಗೈಡ್ಸ್ ಕ್ಯಾಪನ್‌ಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜುಲೈ 12 ರಂದು ಜಿಲ್ಲಾ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ಸಮಾವೇಶವನ್ನು ಜಿಲ್ಲಾ ಕೇಂದ್ರ ಕಛೇರಿ ನವನಗರ ಇಲ್ಲಿ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ರಾಜಶೇಖರ ಪಟ್ಟಣಶೆಟ್ಟಿ ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆರವರು ಆಗಮಿಸಿ ಸ್ಕೌಟ್–

ಗೈಡ್‌ನ ರೋವರ್–ರೇಂಜರ್ ಘಟಕಗಳನ್ನು ತಪ್ಪದೇ ಕಾಲೇಜುಗಳಲ್ಲಿ ಪ್ರಾರಂಭಿಸಬೇಕು. ಅದರ ಪ್ರಾಮುಖ್ಯತೆ ವಿದ್ಯಾರ್ಥಿಗಳಿಗೆ ತಿಳಿಸಬೇಕೆಂದು ಮಾತನಾಡಿದರು. ಅತಿಥಿಗಳಾಗಿ ಶ್ರೀ ಸಿ.ಎ. ಸಾವಳಗಿ ಜಿಲ್ಲಾ ಆಯುಕ್ತರು, ಸ್ಕೌಟ್ಸ್ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಶ್ರೀ ನಾನೇಗೌಡ ಗೌಡರ, ತಾಲ್ಲೂಕು ಕಾರ್ಯದರ್ಶಿಗಳು ಬಾಗಲಕೋಟೆ ಇವರು ಓ.ವೈ.ಎಂ.ಎಸ್. ಕುರಿತು ಮಾಹಿತಿ ನೀಡಿದರು. ಶ್ರೀಮತಿ ಸುಮಂಗಲಾ ಮೇಟಿ, ಶ್ರೀಮತಿ ರೇಖಾಗೂಗಿ ರೇಂಜರ್ ಲೀಡರ್ ಮತ್ತು ವಿವಿಧ ಕಾಲೇಜುಗಳ ರೋವರ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ ಹಾಗೂ ರೋವರ್–ರೇಂಜರ್‌ಗಳು ಉಪಸ್ಥಿತರಿದ್ದರು.

ಬೆಂಗಳೂರು ಉತ್ತರ

* ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಇವರ ಜಂಟಿ ಆಶ್ರಯದಲ್ಲಿ ಆಯೋಜಿಸಿದ 'ವಿಶ್ವ ಪರಿಸರ ದಿನ'ದ ಅಂಗವಾಗಿ ವಿಧಾನ ಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ಪರಿಸರ ಜನಜಾಗೃತಿ ಜಾಥಾವನ್ನು ನಡೆಸಲಾಯಿತು. ಮಾನ್ಯ ಉಪ ಮುಖ್ಯಮಂತ್ರಿಯಾದ ಶ್ರೀ ಡಿ.ಕೆ. ಶಿವಕುಮಾರ್ ಜಾಥಾಕ್ಕೆ ಚಾಲನೆ ನೀಡಿ ಪರಿಸರ ರಕ್ಷಣೆ ಎಲ್ಲರ ಹೊಣೆ ಎಂದರು ಹಾಗೂ ಸ್ಕೌಟ್ಸ್–ಗೈಡ್ಸ್ ಪರಿಸರ ರಕ್ಷಣೆಯಲ್ಲಿ ಸದಾ ಮುಂಚೂಣಿಯಲ್ಲಿ ಇರುತ್ತಾರೆ ಎಂದರು. ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆರವರು ಜಾಥಾದ ಮಹತ್ವ ತಿಳಿಸಿದರು ಬೆಂಗಳೂರು ಉತ್ತರ ಜಿಲ್ಲೆಯಿಂದ 1450 ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ರೇಂಜರ್ಸ್ ಈ ಜಾಥಾದಲ್ಲಿ ಭಾಗವಹಿಸಿದರು. ತದನಂತರ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಜರುಗಿದ ಸಭಾ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಭಾಗವಹಿಸಿ ವಿಶ್ವ ಪರಿಸರ ದಿನದ ಮಹತ್ವ ಹಾಗೂ ಶುಭಾಶಯ ಕೋರಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಡಾ॥ ಪ್ರಸನ್ನಕುಮಾರ್ ಭಾಗವಹಿಸಿದ್ದರು.

* ಜುಲೈ 20 ಮತ್ತು 21ರಂದು ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಪಟಾಲಂ ಶಿಬಿರವನ್ನು ದಿ ಸ್ಮಾರ್ಟ್ ಸ್ಕೂಲ್ ಮಂಚೋಳ್ಳಿ ಇಲ್ಲಿ ನಡೆಸಲಾಯಿತು. ಸ್ಮಾರ್ಟ್

ಸ್ಕೂಲ್ ಮಂಚೋಳ್ಳಿಯ ಶಾಲಾ ಮುಖ್ಯಸ್ಥರಾದ ಶ್ರೀ ಶ್ಯಾಮ್ ಸುಂದರ್ ಶರ್ಮಾರವರು ಶಿಬಿರವನ್ನು ಉದ್ಘಾಟಿಸಿದರು ಹಾಗೂ ಸ್ಕೌಟಿಂಗ್, ಜೀವನದ ದಾರಿ ಎಂದರು. ರಾಜ್ಯ ಗೈಡ್ ಆಯುಕ್ತರಾದ ಶ್ರೀಮತಿ ಗೀತಾ ನಟರಾಜ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪಟಾಲಂ ಶಿಬಿರದ ಮಹತ್ವ ತಿಳಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನು ಸ್ವಾಗತಿಸಿದರು. ತದನಂತರ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭೇಟಿ ನೀಡಿ ಸ್ಕೌಟ್ಸ್–ಗೈಡ್ಸ್ ಜೊತೆ ಬೆರೆತು ವಿಚಾರ ವಿನಿಮಯ ಮಾಡಿಕೊಂಡರು ಹಾಗೂ ಅವರೊಂದಿಗೆ ಬೆರೆತು ಧ್ವಜ ಕಟ್ಟುವ ವಿಧಾನ, ಮ್ಯಾಪಿಂಗ್, ಎಸ್ಟಿಮೇಶನ್ ಸರ್ವಧರ್ಮ ಪ್ರಾರ್ಥನೆ ಬಿ.ಪಿ.ಸಿಕ್ಸ್ ಇತ್ಯಾದಿಯ ಬಗ್ಗೆ ತರಬೇತಿಯನ್ನು ನೀಡಲಾಯಿತು. 22 ಶಾಲೆಗಳಿಂದ 350 ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಶಿಬಿರದಲ್ಲಿ ಭಾಗವಹಿಸಿದ್ದರು.

ಬೆಳಗಾವಿ

* ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರುಗಳ ವಾರ್ಷಿಕ ಸಮಾವೇಶ ಹಾಗೂ ಪುನಶ್ಚೇತನ ಕಾರ್ಯಾಗಾರವನ್ನು ಜುಲೈ 11 ರಂದು ಖಾನಾಪುರ್ ತಾಲೂಕಿನ ಮಿಲಾಗ್ರಿ ಚರ್ಚ್ ಶಾಲೆ ಖಾನಾಪೂರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ರಾಜೇಶ್ವರಿ ಕುಡಚಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಲಯದಲ್ಲಿ ಸುಮಾರು 600 ಶಾಲೆಗಳು ಇದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು ವಲಯದ ಎಲ್ಲಾ ಶಾಲೆಗಳಲ್ಲೂ ಘಟಕಗಳನ್ನು ತೆರೆಯಲು ತಮ್ಮ ಸಹಕಾರ ಇದೆಯೆಂದು ಘೋಷಿಸಿದರು. ಕಾರ್ಯಕ್ರಮದಲ್ಲಿ ಬಿಆರ್‌ಸಿ ಎ ಚಚಡಿ ಜಿಲ್ಲಾ ಸಂಸ್ಥೆಯ ವಿಠ್ಠಲ್ ಎಸ್.ಬಿ. ಚರ್ಚ್ ಶಾಲೆಯ ಪ್ರಿನ್ಸಿಪಾಲ್‌ರಾದ ಶ್ರೀ ಅಳವಣಿ, ಡಿ.ಓ. ಶ್ರೀ ರಾಜಕುಮಾರ್ ಕುಂಬಾರ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಶ್ರೀ ಎಸ್.ಕೆ. ಬೆಂಡಿಗೇರಿ ಸುಮಾರು 70 ಜನ ಸ್ಕೌಟ್ ಗೈಡ್ ಶಿಕ್ಷಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

* ಸ್ಥಳೀಯ ಸಂಸ್ಥೆ ಬೈಲಹೊಂಗಲ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ. ಶ್ರೀ ಸೋಮೇಶ್ವರ ಶುಗರ್ ಲಿಮಿಟೆಡ್, ಬೆಳವಡಿ. ವಿಜಯಕಾಂತ್ ಡೈರಿ ಹಾಗೂ ಫುಡ್ ಪ್ರಾಡಕ್ಟ್ ಲಿಮಿಟೆಡ್ ನೇಗಿನಹಾಳ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬೈಲಹೊಂಗಲ ಇವರ ಸಯುಕ್ತ ಆಶ್ರಯದಲ್ಲಿ ಬೈಲಹೊಂಗಲ ನಗರದ ಬಿ.ಆರ್.ಸಿ. ಕೇಂದ್ರದಲ್ಲಿ ಸ್ಕೌಟ್–ಗೈಡ್ ಮಕ್ಕಳಿಗೆ ತಾಲೂಕ ಹಂತದ "ಪರಿಸರ ದಿನಾಚರಣೆ 2024"ರ ನಿಮಿತ್ತ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಸೋಮೇಶ್ವರ ಶುಗರ್ಸ ಬೆಳವಾಡಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಕಾರ್ಖಾನೆ ಉಪಾಧ್ಯಕ್ಷರಾದ ಶ್ರೀ ಮಹಾಂತೇಶ್ ಮತ್ತಿಕೊಪ್ಪ (ವಕೀಲರು) ರವರು ಆಗಮಿಸಿ. ಸ್ಕೌಟ್ಸ್ ಮತ್ತು ಗೈಡ್ಸ್ ದೇಶ ಪ್ರೇಮ ಬೆಳೆಸುವುದು ಜೊತೆಗೆ ಪರಿಸರ ಅರಿವು ಮೂಡಿಸುವದು ನಮ್ಮ ಕರ್ತವ್ಯ ಎಂದೂ ನಾವು ಪರಿಸರವನ್ನು ಉಳಿಸಿದರೆ ಅದು ನಮ್ಮನ್ನು ಉಳಿಸುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀ ಕಲಕುಟಕರ್ ಪುರಸಭೆ ಸದಸ್ಯರು, ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀ ಬಿ ಎನ್.ಕಸಾಳೆ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಶಿಕ್ಷಣ ಶಿಕ್ಷಣ ಸಂಯೋಜಕರಾದ ಮಹೇಶ್ ಯರಗಟ್ಟಿ ಹಾಗೂ ಶಾಲೆಯ ಮುಖ್ಯೋಪಾಧ್ಯಾಯರಾದ ಚಂದ್ರಶೇಖರ್ ಶೀಗೆಹಳ್ಳಿ, ಹಾಜರಿದ್ದರು. ತಾಲೂಕು ಹಂತದ ಕಾರ್ಯಕ್ರಮವನ್ನು ಸ್ಕೌಟ್ಸ್–ಗೈಡ್ಸ್ ಕಾರ್ಯದರ್ಶಿಯ ಶ್ರೀ ಅಜ್ಜಪ್ಪ ಅಂಗಡಿ ಸಂಯೋಜಿಸಿದ್ದರು.

ವಿವಿಧ ಶಾಲೆಗಳಿಂದ ಮಾರ್ಗದರ್ಶಿ ಶಿಕ್ಷಕರು ಹಾಗೂ ಸುಮಾರು 150 ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿ ಚಿತ್ರಕಲೆ, ಭಾಷಣ, ಪ್ರಬಂಧ ಹಾಗೂ ಸ್ವರಚಿತ ಕವನ ಮತ್ತು ರಂಗೋಲಿ ಸ್ಪರ್ಧೆಯಲ್ಲಿ ಪರಿಸರದ ಜಾಗೃತಿಯನ್ನು ಮೂಡಿಸುವಂತಹ ವಿವಿಧ ಕಲಾಕೃತಿಗಳನ್ನು ರಚಿಸಿದರು. ಮತ್ತು ಅತ್ಯುತ್ತಮವಾಗಿ ಭಾಷಣ ಮಾಡಿದರು. ಪ್ರತಿಭೆಗೆ ತಕ್ಕಂತೆ ಶ್ರೀ ಸೋಮೇಶ್ವರ ಶುಗರ್ಸ, ಬೆಳವಡಿ ಹಾಗೂ ವಿಜಯಕಾಂತ್ ಡೈರಿ ಹಾಗೂ ಫುಡ್ ಪ್ರೊಡಕ್ಟ್ ಲಿಮಿಟೆಡ್ ನೇಗಿನಹಾಳ ಹಾಗೂ ಶ್ರೀ ಸೋಮಲಿಂಗಪ್ಪ ತಿರಕನ್ನವರ್, ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಇವರು ನಗದು ರೂಪದಲ್ಲಿ (ಐದು ಸಾವಿರ) ನೀಡಿದ ದೇಣಿಗೆಯ ಹಣದ ಮೂಲಕ ಪ್ರತಿ ವಿಭಾಗದಲ್ಲಿ ಪ್ರಥಮ 200 ರೂ. ದ್ವಿತೀಯ 150 ರೂ.ಹಾಗೂ ತೃತೀಯ 100 ರೂ ನಗದು ಬಹುಮಾನವನ್ನು ಮತ್ತು ಪ್ರಶಸ್ತಿ ಪತ್ರಗಳನ್ನು ಹಾಗೂ ಹಣವನ್ನು ನೀಡಿ ಮಾತನಾಡಿದ ಪ್ಯಾಟಿಯವರು "ನೀವು ಪರಿಸರದ ಬಗ್ಗೆ ಜಾಗೃತಿಯನ್ನು ಮೂಡಿಸುವ ಜೊತೆಗೆ ತಮ್ಮ ಮನೆಯಲ್ಲಿ ಒಂದಾದರೂ ಗಿಡವನ್ನು ಬೆಳೆಸುವುದಾದರೆ ಈ ಪರಿಸರ ದಿನಾಚರಣೆ ಆಚರಿಸಿದ್ದು ಸಾರ್ಥಕ ಎಂದು ಸ್ಪಷ್ಟಪಡಿಸಿದರು". ಶ್ರೀ ಮಂಜುನಾಥ ಕಡಸಗಟ್ಟಿ, ಶ್ರೀ ಶಿವಾನಂದ ಕುರಿ, ಸಿದ್ದು ನೇಸರ್ಗಿ, ಗೌಡಪ್ಪ ಪಾಟೀಲ್ ಅರ್ಪಣಾ ಕಡಬಿ, ಯುವರಾಣಿ ಎಸ್. ಮತ್ತು ಅರ್ಚನಾ ಕುಲಕರ್ಣಿ ಶ್ರೀಶೈಲ ಹಿರೇಮಠ, ಶ್ರೀಕಾಂತ್ ಪಾಟೀಲ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಜೂನ್ 25 ರಂದು ನಿಪ್ಪಾಣಿ ಸ್ಥಳೀಯ ಸಂಸ್ಥೆಯ 2023–24ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರುಗಳ ವಾರ್ಷಿಕ ಸಮಾವೇಶ ಮತ್ತು ನಿಪ್ಪಾಣಿ

ಸ್ಥಳೀಯ ಸಂಸ್ಥೆಯ ಸರ್ವ ಸಾಮಾನ್ಯ ಸಭೆಯನ್ನು ನಗರದ ಸಿ.ಎಂ.ಸಿ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀಮತಿ ಎಂ.ಎ. ನಾಯಕ ವಹಿಸಿದ್ದರು. ತರಬೇತಿ ಪಡೆದ ಶಿಕ್ಷಕರು ಕಡ್ಡಾಯವಾಗಿ ಸಭೆಯಲ್ಲಿ 58 ಜನ ಸ್ಕೌಟರ್ ಮತ್ತು ಗೈಡರ್ ಗಳು ಭಾಗವಹಿಸಿ ದಳ ನವೀಕರಣ ಮಾಡಿಕೊಂಡರು.

* ಜುಲೈ 11 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬೆಳಗಾವಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರುಗಳ ಸಹಯೋಗದಲ್ಲಿ ನಡೆದ "ವಿಶ್ವ ಜನಸಂಖ್ಯಾ ದಿನಾಚರಣೆ" ಪ್ರಯುಕ್ತ ಜಾಗೃತಿ ಜಾಥಾವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಮಹೇಶ ಕೋಣಿ ಇವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಬೆಳಗಾವಿ ಬೀಮ್ಸ್ ಕಾಲೇಜಿನ ವಿದ್ಯಾರ್ಥಿಗಳು ಬೆಳಗಾವಿ ನಗರದ 250 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು. ಸದರಿ ಜಾಥಾ ಜಿಲ್ಲಾಧಿಕಾರಿಗಳ ಕಚೇರಿಯಿಂದ ಬೀಮ್ಸ್ ಕಾಲೇಜಿನ ಸಭಾಂಗಣದವರೆಗೆ ನಡೆಯಿತು.

* ಜುಲೈ 06 ರಂದು ಹುಕ್ಕೇರಿ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಕಬ್ಸ್ ಮತ್ತು ಬುಲ್‌ಬುಲ್ಸ್ ಘಟಕಗಳ ನವೀಕರಣ ಸಭೆಯು ತಾಲೂಕಿನ ಶ್ರೀ ಶಿವಾನಂದ ಮಠ, ಘೋಡಗೇರಿ ಇಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಪ್ರಭಾವತಿ ಪಾಟೀಲ ವಹಿಸಿದ್ದರು. ಸದರಿ ಸಭೆಯಲ್ಲಿ ಒಟ್ಟು 46 ಘಟಕಗಳು ನವೀಕರಣಗೊಂಡಿವೆ. ಸಭೆಯಲ್ಲಿ ಭಾಗವಹಿಸಿದ ಸ್ಕೌಟರ್ ಮತ್ತು ಗೈಡರ್ ಗಳಿಗೆ ಹೊಸದಾಗಿ ದಾಖಲಾತಿಯನ್ನು ಪಡೆದ ಕಬ್, ಬುಲ್ ಬುಲ್, ಸ್ಕೌಟ್ ಮತ್ತು ಗೈಡ್ ಮಕ್ಕಳನ್ನು ಓ.ವೈ.ಎಂ.ಎಸ್.ನಲ್ಲಿ ನೋಂದಾಯಿಸುವ ಕುರಿತು ಮಾಹಿತಿಯನ್ನು ತಿಳಿಸಲಾಯಿತು. ಹೊಸದಾಗಿ ದಾಖಲಾತಿ ಪಡೆದ ಮಕ್ಕಳಿಗೆ ಮುಂದಿನ ದಿನಗಳಲ್ಲಿ ವಿವಿಧ ಹಂತದ ಪರೀಕ್ಷೆಗಳಿಗೆ ಭಾಗವಹಿಸಲು ಪ್ರೇರೇಪಿಸುವಂತೆ ತಿಳಿಸಲಾಯಿತು.

* ಜುಲೈ 13 ರಂದು ವಿದ್ಯಾ ಪ್ರಸಾರಕ ಸಮಿತಿಯ ಸಿ.ಎಸ್.ಬೆಂಬಳಗಿ ಕಲಾ, ಶಾ.ಎಂ.ಆರ್. ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯ ರಾಮದುರ್ಗದಲ್ಲಿ ರೋವರ್ಸ್ ಮತ್ತು ರೇಂಜರ್ ಘಟಕ ಹಾಗೂ ಐ.ಕ್ಯೂ.ಎ.ಸಿ. ಅಡಿಯಲ್ಲಿ 2022–23ನೆಯ ಶೈಕ್ಷಣಿಕ ಸಾಲಿನ ರಾಜ್ಯ

ಪುರಸ್ಕಾರ ಪ್ರಶಸ್ತಿ ವಿಜೇತ ರೋವರ್ಸ್–ರೇಂಜರ್ಸ್‌ಗಳಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅತಿಥಿಗಳಾಗಿ ಜಿಲ್ಲಾ ಸ್ಕೌಟ್ ತರಬೇತಿ ಸಲಹೆಗಾರರಾದ ಶ್ರೀ ವೈ.ಎ. ಗೊರವನಕೊಳ್ಳ, ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್.ವಿ. ಕುಲಕರ್ಣಿ ಗೌರವ ಉಪಸ್ಥಿತಿಯಾಗಿ ಆಗಮಿಸಿದ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯರಾದ ಶ್ರೀ ಎಸ್.ಎಂ. ಸಕ್ರಿಯವರೂ ಸ್ಕೌಟ್–ಗೈಡ್ ಉತ್ತಮ ವಿಷಯಗಳನ್ನು ಕಲಿಸುವುದೇ ಅಲ್ಲದೆ ಇತರರಿಗೂ ಕೂಡ ಶಿಸ್ತನ್ನು ಕಲಿಸುತ್ತದೆ ಎಂದು ಖುಷಿ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ದಾಮೋದರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಧ್ಯಕ್ಷೀಯ ನುಡಿಗಳನ್ನಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಪಿ.ಬಿ. ತೆಗ್ಗಿಹಳ್ಳಿ ಸ್ವಾಗತ ಭಾಷಣ ಮಾಡಿದರು. ಮಹಾವಿದ್ಯಾಲಯದ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

* ಜುಲೈ 15 ರಂದು 2024–25ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ ಮತ್ತು ಬುಲ್ ಬುಲ್ ಘಟಕ ಪ್ರಥಮ ವರ್ಷದ ವರ್ಷಾಚರಣೆಯನ್ನು ಕೆ.ಆರ್.ಸಿ.ಈ.ಎಸ್. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಚರಿಸಲಾಯಿತು. ಪ್ರಾಚಾರ್ಯರಾದ ಶ್ರೀ ಮಲ್ಲಿಕಾರ್ಜುನ್ ಬಿರಾದಾರ್ ಅಧ್ಯಕ್ಷೀಯ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು ಶ್ರೀ ಸಿ.ಐ. ಕರ್ಕಿ ವರದಿ ವಾಚನ ಮಂಡಿಸಿದರು ಈ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ವಿ.ಎಸ್. ಬೆಲ್ಲದ್ ಹಾಗೂ ಶ್ರೀ ಎಸ್.ಪಿ. ಗದಗ್ ಹಾಗೂ ಕೆ.ಆರ್.ಸಿ.ಈ.ಎಸ್. ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

* ಜಿಲ್ಲಾ ಸಂಸ್ಥೆ ಬೆಳಗಾವಿ ಹಾಗೂ ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹುಕ್ಕೇರಿ ಇವರುಗಳ ಸಹಯೋಗದೊಂದಿಗೆ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯ ಶ್ರೀ ಶಿವಾನಂದ ಮಠದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಜಿಲ್ಲಾ ಮಟ್ಟದ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮೂಲ ತರಬೇತಿ ಶಿಬಿರವನ್ನು ಜುಲೈ 01 ರಿಂದ 07ರ ವರೆಗೆ ಆಯೋಜಿಸಲಾಯಿತು. ಶಿವಾನಂದ ಮಠದ ಪೀಠಾಧಿಪತಿಗಳಾದ ಶ್ರೀ ಮಲ್ಲಯ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಹಾಗೂ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ಪ್ರಭಾವತಿ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತಿ

ಉಪಾಧ್ಯಕ್ಷರುಗಳು, ಶಿಬಿರದ ನಾಯಕರುಗಳು, ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಆರ್.ಎಂ. ಶೆಟ್ಟಿಮನಿ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಎ.ಐ. ಕೋಟಿವಾಲೆ ಕಾರ್ಯಕ್ರಮವನ್ನು ನಿರೂಪಿಸಿ ಸ್ವಾಗತಿಸಿದರು.

* ಜುಲೈ 04 ರಂದು ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿಯ ನೂತನ ಸಂಸದರು ಕುಮಾರಿ ಪ್ರಿಯಾಂಕಾ ಸತೀಶ್ ಜಾರಕಿಹೊಳಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ನಮ್ಮ ಕೈಲಾದಷ್ಟು ಸ್ಕೌಟ್ ಮತ್ತು ಗೈಡ್ ಸಂಸ್ಥೆಗೆ ಸಹಾಯ ಮತ್ತು ಸಹಕಾರವನ್ನು ನೀಡುತ್ತೇವೆ ಎಂದು ಹೇಳಿದರು. ಅಮೆಚೂರು ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷರು ಹಾಗೂ ಯುವ ಧುರೀಣರಾದ ಶ್ರೀ ರಾಹುಲ್ ಸತೀಶ್ ಜಾರಕಿಹೊಳಿ ಊರಿನ ಗಣ್ಯಮಾನ್ಯರು, ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಜುಲೈ 06 ರಂದು ಮೂಲ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವು ಜರುಗಿತು. ಸಮಾರಂಭದ ಸಾನಿಧ್ಯವನ್ನು ಶ್ರೀಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಮಹಾಂತೇಶ್ ಶಿಕ್ಷಣ ಸಂಸ್ಥೆ ಬೆಲ್ಲದ ಬಾಗೇವಾಡಿ ಅಧ್ಯಕ್ಷರು ಶ್ರೀ ಪವನ ರಮೇಶ್ ಕತ್ತಿ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಪ್ರಭಾವತಿ ಪಾಟೀಲ ವಹಿಸಿದ್ದರು. ವಿವಿಧ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಳ್ಳಾರಿ

* ಜೂನ್ 21 ರಂದು 10ನೇ ಅಂತರಾಷ್ಟ್ರೀಯ "ಯೋಗ ದಿನಾಚರಣೆ" ಯನ್ನು ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆ ಕೆ. ಬೆಳಗಲ್‌ನಲ್ಲಿ ಆಚರಿಸಲಾಯಿತು. ಸ್ಕೌಟ್ಸ್ ಹಾಗೂ ಸಹ ಶಿಕ್ಷಕರಾದ ಶ್ರೀ ಮಂಜುನಾಥಸ್ವಾಮಿ, ಶ್ರೀ ಹೆಚ್. ಭೋಜರಾಜ ಹಾಗೂ ಅತಿಥಿ ಶಿಕ್ಷಕರೊಂದಿಗೆ ಕಾರ್ಯದರ್ಶಿಗಳಾದ ಶ್ರೀ ನಟರಾಜ ಸ್ವಾಮಿಯವರು ಯೋಗದ ಬಗ್ಗೆ ಮಾಹಿತಿಯನ್ನು ತಿಳಿಸಿದರು.

ಶಾಂತಿ ನಿಕೇತನ ವಿದ್ಯಾ ಮಂದಿರ ಆಂಗ್ಲ ಮಾಧ್ಯಮ ಶಾಲೆ ಸಿರುಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀ ಕೆ. ಕೃಷ್ಣ, ಖಜಾಂಚಿಗಳು ಹಾಗೂ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲಲಿತಾಶಾಸ್ತ್ರಿ ಹಾಗೂ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸುಧೀಂದ್ರ ಕೆ., ಗೈಡ್ಸ್ ಶಿಕ್ಷಕಿಯಾದ ಶ್ರೀಮತಿ ಯೋಗೇಶ್ವರಿ ಹಾಗೂ ಸ್ಕೌಟ್ಸ್-ಗೈಡ್ಸ್ ಮಕ್ಕಳಿಗೆ ಯೋಗ ಮಾಡಿಸಿ "ವಿಶ್ವಯೋಗ ದಿನಾಚರಣೆ"ಯನ್ನು ಆಚರಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವ್ ಗಾಂಧಿ ನಗರ) ಸಿರುಗುಪ್ಪದಲ್ಲಿ ಶ್ರೀಮತಿ ಗೀತಾ ಜೆ. ಗೈಡ್ಸ್ ಶಿಕ್ಷಕಿ ಗೈಡ್ಸ್ ಮಕ್ಕಳಿಗೆ ಯೋಗ ಶಿಕ್ಷಣ ನೀಡಿ ಬಿಸ್ಕೆಟ್ಸ್ ಹಾಗೂ ಜೂಸ್ ವಿತರಿಸಿದರು.

* ಜುಲೈ 20 ರಂದು ಗುರುಭವನ ಬಳ್ಳಾರಿ ಜಿಲ್ಲಾ ಸಿರುಗುಪ್ಪದಲ್ಲಿ "ಸ್ಕೌಟರ್ಸ್-ಗೈಡರ್ಸ್ ಸಮಾವೇಶ" ನಡೆಯಿತು. ಈ ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯಿಂದ ಬಿ.ಆರ್.ಪಿ.ರವರಾದ ಶ್ರೀ ಗಜೇಂದ್ರ, ಶ್ರೀಮತಿ ರುದ್ರವೇಣಿ, ಸಿ.ಆರ್.ಪಿ. ಶ್ರೀಮತಿ ಶಾಂತ, ಶ್ರೀ ರಾಜಶೇಖರ, ಒಟ್ಟು 70 ಶಿಕ್ಷಕರು ಸಮಾವೇಶದಲ್ಲಿ ಭಾಗವಹಿಸಿದ್ದರು. ಬಿ.ಆರ್.ಪಿ. ಹಾಗೂ ಸಿ.ಆರ್.ಪಿ.ರವರು ಇಲಾಖೆಯಿಂದ ನಿಮಗೆ ಎಲ್ಲಾ ಸಹಕಾರವನ್ನು ನೀಡುತ್ತೇವೆ ನೀವು ಮೊದಲು ಶಾಲಾ ಹಂತದಲ್ಲಿ ಘಟಕಗಳನ್ನು ಪ್ರಾರಂಭಿಸಿ ಎಂದು ಹೇಳಿದರು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ದಕ್ಷಿಣ

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಸ್ಥಳಿಯ ಮತ್ತು ದಳ ಮಟ್ಟದಲ್ಲಿ ಆಯೋಜಿಸಲಾಯಿತು. ಜಿಲ್ಲಾದ್ಯಂತ ಕಬ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಪರಿಸರ ದಿನಾಚರಣೆಯ ಅಂಗವಾಗಿ ಗಿಡಗಳನ್ನು ನೆಡುವುದು, ಸಸಿಗಳನ್ನು ಯಾವ ರೀತಿಯಾಗಿ ಪಾಲನೆ ಮಾಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಜಾಥವನ್ನು ಆಯೋಜನೆ ಮಾಡಲಾಯಿತ್ತು.

* ಜೂನ್ 21 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಅಂಗವಾಗಿ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಮೂಹಿಕವಾಗಿ 10ನೇ "ವಿಶ್ವಯೋಗ ದಿನಾಚರಣೆ" "ಯೋಗೋತ್ಸವ"ವನ್ನು ಆಯೋಜಿಸಲಾಯಿತು. 'ಯೋಗೋತ್ಸವ'ವನ್ನು ಶ್ರೀ ಟಿ.ಕೆ ನಾರಾಯಣಸ್ವಾಮಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಟಿ. ಸಿದ್ದಗಂಗಯ್ಯ ಜಿಲ್ಲಾ ಪದಕ ಕಾರ್ಯದರ್ಶಿ ಇವರ ನೇತೃತ್ವದಲ್ಲಿ ನಡೆಯಿತು. ಶ್ರೀ ಅಣ್ಣಪ್ರ ಜಿ. ಗುರುವ ಅವರು ಆಸನಗಳನ್ನು ಪ್ರದರ್ಶಿಸಿದರು. ಯೋಗೋತ್ಸವದಲ್ಲಿ 500 ಸ್ಕೌಟ್ಸ್-ಗೈಡ್ಸ್, ದಳ ನಾಯಕರುಗಳು ಭಾಗವಹಿಸಿದರು.

ಬೆಂಗಳೂರು ಪೂರ್ವ

* ಜೂನ್ 02 ರಂದು ಆನೇಕಲ್‌ನ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಯಲ್ಲಿ ಆನೇಕಲ್‌ನ ಭಗತ್ ಸಿಂಗ್ ಓಪನ್ ಸ್ಕೌಟ್ ಗ್ರೂಪ್ ಹಾಗೂ ಜಿಗಣಿಯ ಎಸ್.ಎನ್.ಆರ್.ಸಿ. ಕಾಲೇಜಿನ ರೋವರ್ಸ್, ರೇಂಜರ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಬೀಜದುಂಡೆಗಳನ್ನು ತಯಾರಿಸಲಾಯಿತು.

* ಜೂನ್ 05 ರಂದು ಆನೇಕಲ್‌ನ ಸ್ಕೌಟ್ ಕಛೇರಿಯಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ 2024–25ನೇ ಸಾಲಿನ ಪ್ರಥಮ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಇದೇ ಸಂದರ್ಭದಲ್ಲಿ "ವಿಶ್ವಪರಿಸರ ದಿನಾಚರಣೆ" ಪ್ರಯುಕ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಚಿನ್ನಸ್ವಾಮಿರೆಡ್ಡಿ, ಜಿಲ್ಲಾ ಪದಾಧಿಕಾರಿಗಳು ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ವಿ. ಪ್ರಕಾಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಶ್ರೀ ಕೆ. ಚಂದ್ರಶೇಖರ್, ಖಜಾಂಚಿ ಶ್ರೀ ಗೋವಿಂದರಾಜು ಮೊದಲಾದವರು ಉಪಸ್ಥಿತರಿದ್ದರು.

* ಜೂನ್ 21 ರಿಂದ 23ರ ವರೆಗೆ ಸರ್ಜಾಪುರದ ಸೆಂಟ್ ಫಿಲೋಮಿನಾಸ್ ಪ್ರೌಢ ಶಾಲೆಯಲ್ಲಿ 2ನೇ ಹಂತದ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್‌ಗಳ ಪರೀಕ್ಷಾ ಪೂರ್ವ ಸಿದ್ಧತಾ ತರಬೇತಿ ಶಿಬಿರ ಹಾಗೂ ತೃತೀಯ ಸೋಪಾನ ಸ್ಕೌಟ್–ಗೈಡ್ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿತ್ತು. ತರಬೇತಿ ಶಿಬಿರದಲ್ಲಿ ವಿವಿಧ ಶಾಲಾ ಕಾಲೇಜುಗಳ 101 ಸ್ಕೌಟ್ಸ್, 85 ಗೈಡ್ಸ್, 20 ರೋವರ್ಸ್ ಮತ್ತು 10 ರೇಂಜರ್ಸ್ ಭಾಗವಹಿಸಿದ್ದರು. ಪರೀಕ್ಷಾ ಶಿಬಿರದಲ್ಲಿ 10 ಕಬ್ಸ್, 16 ಬುಲ್‌ಬುಲ್ಸ್, 58 ಸ್ಕೌಟ್ಸ್, 66 ಗೈಡ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಶಿಬಿರದ ಮೇಲುಸ್ತುವಾರಿ ವಹಿಸಿದ್ದರು. ಜಿಲ್ಲಾತರಬೇತಿ ಆಯುಕ್ತ ಶ್ರೀ ಆರ್. ಮುನಿರಾಜು, ಎಸ್.ಜಿ.ವಿ. ಮನು ಸಮಾರೋಪ ಸಮಾರಂಭದಲ್ಲಿ ಸರ್ಜಾಪುರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿ. ಮಂಜೇಗೌಡ, ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಎಸ್.ಆರ್. ಮಮತಾ, ಉಪ ಪ್ರಾಂಶುಪಾಲರಾದ ಶ್ರೀಮತಿ ಪದ್ಮಜಾ ಮೊದಲಾದವರು ಉಪಸ್ಥಿತರಿದ್ದರು.

* ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಷ್ಟ್ರೀಯ ಸಂಸ್ಥೆಯವರು ಜೂನ್ 11 ರಿಂದ 15ರ ವರೆಗೆ ಉತ್ತರಖಂಡ್‌ನ ಹರಿದ್ವಾರದ ರೈವಾಲಾದಲ್ಲಿ ರೋವರ್, ರೇಂಜರ್‌ಗಳಿಗಾಗಿ ನಡೆದ ರಾಷ್ಟ್ರಮಟ್ಟದ ಎನ್ವಿರಾನ್ಮೆಂಟ್ ಅವೇರ್‌ನೆಸ್ ಕಮ್ ಟ್ರೆಕ್ಕಿಂಗ್ ಶಿಬಿರದಲ್ಲಿ ಹೆಬ್ಬಗೋಡಿಯ ಎಸ್.ಎಫ್.ಎಸ್. ಕಾಲೇಜಿನ 3 ರೋವರ್ಸ್ ಮತ್ತು 5 ರೇಂಜರ್ಸ್ ಸದರಿ ಶಿಬಿರದಲ್ಲಿ ಭಾಗವಹಿಸಿದ್ದರು.

* ಜೂನ್ 25 ರಂದು ಆನೇಕಲ್‌ನ ಸ್ಕೌಟ್ ಕಛೇರಿಯಲ್ಲಿ ಆನೇಕಲ್ ಸ್ಥಳೀಯ ಸಂಸ್ಥೆಯ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ರೋವರ್ ವಿಭಾಗದ ಲೀಡರ್ ಟ್ರೈನರ್ ಶ್ರೀ ಎ.ಎನ್. ನರೇಂದ್ರಕುಮಾರ್ ವಹಿಸಿದ್ದರು. ಸಿ.ಆರ್.ಪಿ. ಶ್ರೀ ರಾಘವೇಂದ್ರ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಭಾಗವಹಿಸಿದ್ದರು.

* ಜೂನ್ 26 ರಂದು ಅತ್ತಿಬೆಲೆಯ ಸರ್ಕಾರಿ ಮಾದರಿ ಪ್ರಾಥಮಿಕ ಬಾಲಕರ ಪಾಠ ಶಾಲೆಯಲ್ಲಿ ಅತ್ತಿಬೆಲೆ ಸ್ಥಳೀಯ ಸಂಸ್ಥೆಯ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ. ಗೋಪಾಲಕೃಷ್ಣರವರು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಬ್ಯಾಡ್ಜ್ ಕಾರ್ಯದರ್ಶಿ ಶ್ರೀಮತಿ ಸೌಮ್ಯ ಎ. ರೆಡ್ಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಶ್ರೀಮತಿ ಬಿ.ಎನ್. ಪ್ರೇಮಕುಮಾರಿ, ಸಹ ಕಾರ್ಯದರ್ಶಿ ಶ್ರೀ ಗಣೇಶ್ ಪಾರ್ಮರ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಎ.ಎನ್. ಪ್ರಭಾವತಿ, ಖಜಾಂಚಿ ಶ್ರೀ ಅಶೋಕ್ ವಿ. ಸಣ್ಣಮನಿ, ಜಂಟೀ ಕಾರ್ಯದರ್ಶಿ ಶ್ರೀಮತಿ ಆಶಾ, ಗೈಡರ್ ಪ್ರತಿನಿಧಿ ಕು. ವಿದ್ಯಾಶ್ರೀ ಮೊದಲಾದವರು ಉಪಸ್ಥಿತರಿದ್ದರು.

* ಜುಲೈ 12 ರಂದು ಯಡವನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಫ್ಲಾಕ್ ಲೀಡರ್ ಶ್ರೀಮತಿ ಚೈತ್ರರವರ ನೇತೃತ್ವದಲ್ಲಿ ಇಲ್ಲಿನ ಬುಲ್‌ಬುಲ್ ವಿದ್ಯಾರ್ಥಿಗಳು ಸ್ವತಃ ಪೇಪರ್ ಬ್ಯಾಗ್‌ಗಳನ್ನು ರೇಂಜರ್ ಲೀಡರ್ ಕು. ವಿದ್ಯಾಶ್ರೀರವರ ನೇತೃತ್ವದಲ್ಲಿ ತಯಾರಿಸುವ ಮೂಲಕ "ವಿಶ್ವ ಪೇಪರ್ ಬ್ಯಾಗ್ ದಿನಾಚರಣೆ"ಯನ್ನು ಆಚರಿಸಿದರು.

* ಜೂನ್ 24 ರಂದು ದೊಮ್ಮಸಂದ್ರದ ಸರ್ಕಾರಿ ಮಾದರಿ ಪ್ರಾಥಮಿಕ ಬಾಲಕರ ಪಾಠ ಶಾಲೆಯಲ್ಲಿ ಸರ್ಜಾಪುರ ಸ್ಥಳೀಯ ಸಂಸ್ಥೆಯ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿ. ಮಂಜೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಗ್ರಾಮ ಪಂಚಾಯಿತಿ ಸದಸ್ಯೆ ಶ್ರೀಮತಿ ಪದ್ಮಾವತಿ, ಸಿ.ಆರ್.ಪಿ.ಗಳಾದ ಶ್ರೀಮತಿ ಮಂಜುಳ, ಶ್ರೀ ರಮೇಶ್ ಮತ್ತು ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಉಪಸ್ಥಿತರಿದ್ದರು.

* ಜೂನ್ 19 ರಂದು ಬನ್ನೇರುಘಟ್ಟದ ಸ್ಕೂಲ್ ಆಫ್ ಇಂಡಿಯಾ ಶಾಲೆಯಲ್ಲಿ ಜಿಗಣಿ ಸ್ಥಳೀಯ ಸಂಸ್ಥೆಯ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜೆ.ವಿ. ಶಿವರಾಮರೆಡ್ಡಿರವರು ವಹಿಸಿದ್ದರು. ಸ್ಕೂಲ್ ಆಫ್ ಇಂಡಿಯಾ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಮಿತ ರಾಮಚಂದ್ರನ್, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಬಿ. ಚಾಮುಂಡೇಶ್ವರಿ ಮೊದಲಾದವರು ಉಪಸ್ಥಿತರಿದ್ದರು.

* ಜೂನ್ 27 ರಂದು ಹೆಬ್ಬಗೋಡಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹೆಬ್ಬಗೋಡಿ ಸ್ಥಳೀಯ ಸಂಸ್ಥೆಯ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶಾಲಾ ಪ್ರಭಾರಿ ಮುಖ್ಯ ಶಿಕ್ಷಕಿ ಶ್ರೀಮತಿ ಪದ್ಮಾವತಿರವರು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಚಾಮರಾಜನಗರ

* ಜುಲೈ 01 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಾಮರಾಜನಗರದಲ್ಲಿ ಜಿಲ್ಲೆಯ CRP/BRP/TPEO ರವರುಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ರಾಮಚಂದ್ರ ರಾಜೇ ಅರಸ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು, ಈ ಕಾರ್ಯಗಾರಕ್ಕೆ ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ನಿವೃತ್ತ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಶ್ರೀ ಬಿ.ಕೆ. ಬಸವರಾಜ ರವರು ಆಗಮಿಸಿದ್ದರು. ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ತಮ್ಮ ಕ್ಷೇತ್ರದಲ್ಲಿ ಬರುವ ಶಾಲೆಗಳಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ನಿರ್ವಹಿಸಬಹುದಾದಂತಹ ಕರ್ತವ್ಯವನ್ನು ಮತ್ತು ಸಂಸ್ಥೆಯ ಬೆಳವಣಿಗೆ ಉದ್ದೇಶ ಮತ್ತು ತತ್ವಗಳನ್ನು ಸವಿಸ್ತಾರವಾಗಿ ತಿಳಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಚಟುವಟಿಕೆಗಳಿಂದ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಹೊರಹೊಮ್ಮಲು ಸಹಕಾರಿ ಆಗುವ ಏಕೈಕ ಸಂಸ್ಥೆ ಎಂದು ತಿಳಿಸಿದರು. ನಂತರ ಡಯಟ್ ಪ್ರಾಂಶುಪಾಲರಾದ ಶ್ರೀ ಕಾಶಿನಾಥ್‌ರವರು "ಸ್ಕೌಟ್ಸ್ ಸಂಸ್ಥೆಯಿಂದ ಶಿಸ್ತು ಸಂಯಮ ಹಾಗೂ ಸಮಯ ಪಾಲನೆ ಮಕ್ಕಳಲ್ಲಿ ಆತ್ಮಸ್ಥೈರ್ಯ ಮೂಡುವುದು" ಎಂದು ತಿಳಿಸಿದರು. ಸಮಾರೋಪ ಸಮಾರಂಭದಲ್ಲಿ ಆಗಮಿಸಿದ ಶ್ರೀ ರಾಮಚಂದ್ರ ರಾಜೆಅರಸ್, ಉಪನಿರ್ದೇಶಕರುರವರು "ಸ್ಕೌಟ್ಸ್ ಸಂಸ್ಥೆಯು ಅನೇಕ ತರಬೇತಿ ಹಾಗೂ ಮಕ್ಕಳಿಗೆ ಆಯಾ ವಯೋಮಾನಕ್ಕೆ ತಕ್ಕಂತೆ ಶಿಸ್ತುಬದ್ಧ ಕಾರ್ಯಕ್ರಮಗಳ ಯೋಜನೆ ರೂಪಿಸಿ ತರಬೇತಿಯನ್ನು ನೀಡುತ್ತಾ ಸಮಾಜದಲ್ಲಿ ತನ್ನದೇ ಆದ ಚಾಪನ್ನು ಮೂಡಿಸಿದೆ" ಎಂದು ತಿಳಿಸಿದರು. ನಂತರ ಭಾರತ್ ಸ್ಕೌಟ್ಸ್–ಗೈಡ್ಸ್, ಕರ್ನಾಟಕ ವಾರ್ಷಿಕ ಕಾರ್ಯಯೋಜನ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿ, ಶ್ರೀ ಕೆ.ಎಸ್. ಮಹದೇವಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಅನ್ನಪೂರ್ಣಮ್ಮ ಜಿಲ್ಲಾ ತರಬೇತಿ ಆಯುಕ್ತರು (ಗೈ) ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು 64 CRP/BRPರವರು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಚಾಮರಾಜನಗರ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಜುಲೈ 05 ರಂದು ಸೇವಾ ಭಾರತಿ ಶಿಕ್ಷಣ ಸಂಸ್ಥೆ ಚಾಮರಾಜನಗರದಲ್ಲಿ ಸಾಮಾನ್ಯ ಮಾಹಿತಿ ಶಿಬಿರ ಹಾಗೂ ಕಾಲೇಜು ಉಪನ್ಯಾಸಕರುಗಳಿಗೆ ಪ್ರಾರಂಭಿಕ ಶಿಬಿರವನ್ನು ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ರಾಮಚಂದ್ರ ರಾಜೆಅರಸ್ ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಈ ಕಾರ್ಯಗಾರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು, ಯುವ ಜನಾಂಗದ

ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಷಯಗಳನ್ನು ಚರ್ಚಿಸಲಾಯಿತು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ವಯಸ್ಕರ ಸಂಪನ್ಮೂಲ)ರವರು ಅಗತ್ಯ ಮಾಹಿತಿ ನೀಡಿದರು. ಸಭೆಯಲ್ಲಿ ಡಾ॥ ಶ್ವೇತಾ ಶಶಿಧರ್, ಜಿಲ್ಲಾ ಆಯುಕ್ತರು (ಗೈಡ್), ಅಶ್ವಥ್ ನಾರಾಯಣ, ಜಿಲ್ಲಾ ಉಪಾಧ್ಯಕ್ಷರು, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ರಾಮಚಂದ್ರರವರು ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 220 ಶಿಕ್ಷಕ/ ಶಿಕ್ಷಕಿಯರು ಹಾಗೂ ಉಪನ್ಯಾಸಕ/ಉಪನ್ಯಾಸಕಿಯರು ಹಾಜರಿದ್ದರು.

* ಜುಲೈ 11 ರಂದು ತಾಲೂಕು ಮಟ್ಟದ ಸ್ಕೌಟ್ಸ್–ಗೈಡ್ಸ್ ಸಮಾವೇಶವನ್ನು ಬಿ.ಆರ್.ಸಿ. ಕೇಂದ್ರ ಹನೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮಹೇಶರವರು ವಹಿಸಿ "ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸ ಬೇಕೆಂದು ದಳ ನಾಯಕ/ ನಾಯಕಿಯರಲ್ಲಿ ತಿಳಿಸಿದರು" ನಂತರ ವಾರ್ಷಿಕ ಕಾರ್ಯಯೋಜನೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಮಹದೇವರವರು ಆಗಮಿಸಿದ್ದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವಿ. ಎಂ. ರಾಮಚಂದ್ರರವರು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಹಾಗೂ ಉದ್ದೇಶ ತತ್ವಗಳನ್ನು ತಿಳಿಸಿದರು. ಈ ಸಮಾವೇಶದಲ್ಲಿ 28 ದಳನಾಯಕ/ ನಾಯಕಿಯರು ಹಾಜರಿದ್ದರು.

* ಜುಲೈ 12 ರಂದು ತಾಲೂಕು ಮಟ್ಟದ ಸ್ಕೌಟ್ಸ್–ಗೈಡ್ಸ್ ಸಮಾವೇಶವನ್ನು ಬಿ.ಆರ್.ಸಿ. ಕೇಂದ್ರ ಕೊಳ್ಳೇಗಾಲದಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಮಂಜುಳಾರವರು ವಹಿಸಿ "ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ನಡೆಸುತ್ತಿರುವುದು ತುಂಬಾ ಸಂತೋಷದ ವಿಷಯ ಹಾಗೂ ಮಕ್ಕಳಲ್ಲಿ ಕೌಶಲ್ಯಾತ್ಮಕ ಚಟುವಟಿಕೆಗಳು ಹೊರಹೊಮ್ಮಲು ಸಹಕಾರಿ ಆಗುವುದೆಂದು ಮತ್ತು ಶಾಲೆಯ ಪರಿಸರ ಸುಂದರವಾಗಿ ನಿರ್ಮಾಣವಾಗುವುದು ಎಂದು ದಳ ನಾಯಕ/ ನಾಯಕಿಯರಲ್ಲಿ ತಿಳಿಸಿದರು". ನಂತರ ವಾರ್ಷಿಕ ಕಾರ್ಯ ಯೋಜನೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವಿ.ಎಂ. ರಾಮಚಂದ್ರರವರು ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳು ಹಾಗೂ ಉದ್ದೇಶ ತತ್ವಗಳನ್ನು ತಿಳಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಶಿವಸ್ವಾಮಿ ಎಸ್.ರವರು ಉಪಸ್ಥಿತರಿದ್ದರು. ಈ ಸಮಾವೇಶದಲ್ಲಿ 42 ದಳ ನಾಯಕ/ನಾಯಕಿಯರು ಹಾಜರಿದ್ದರು.

ಚಿಕ್ಕಮಗಳೂರು

* ಜುಲೈ 09 ರಂದು ಚಿಕ್ಕಮಗಳೂರು ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಉಪನಿರ್ದೇಶಕರು (ಆಡಳಿತ) ಶ್ರೀ ಪುಟ್ಟರಾಜುರವರನ್ನು ಜಿಲ್ಲಾ ಸಂಸ್ಥೆ ಪರವಾಗಿ ಜಿಲ್ಲಾ ಮುಖ್ಯ ಆಯುಕ್ತರು ಜಿಲ್ಲಾ ಕಾರ್ಯದರ್ಶಿಗಳು 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಜ್ಞಾನಮೂರ್ತಿ ಅವರಿಗೆ 24–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಜಿಲ್ಲೆಯಲ್ಲಿ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡುವಂತೆ ಮನವಿ ಸಲ್ಲಿಸಲಾಯಿತು. ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ (ಆಡಳಿತ) ಶ್ರೀಮತಿ ನಯನರವರನ್ನು ಭೇಟಿ ಮಾಡಿ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ತಾಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿಯಿಂದ ಅನುದಾನ ಬಿಡುಗಡೆ ಬಗ್ಗೆ ಚರ್ಚಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಲೋಕೇಶ ಅವರನ್ನು ಭೇಟಿ ಮಾಡಿ 2024–25ನೇ ಸಾಲಿನ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಜಿಲ್ಲೆಯಲ್ಲಿ ಎಲ್ಲಾ ವಸತಿ ಶಾಲೆಗಳಲ್ಲಿ ದಳಗಳನ್ನು ತೆರೆಯುವ ಬಗ್ಗೆ ಜಿಲ್ಲಾ ಕಾರ್ಯದರ್ಶಿಗಳು ಮನವಿ ಮಾಡಿದರು.

* ಜುಲೈ 09 ರಂದು ಸ್ಥಳೀಯ ಇನ್ಫೆಂಟ್ ಜೀಸಸ್ ಶಾಲೆಗೆ ಭೇಟಿ ನೀಡಿ ಮುಖ್ಯೋಪಾಧ್ಯಾಯರೊಂದಿಗೆ ಶಾಲೆಯಲ್ಲಿ ಕಬ್ಸ್–ಬುಲ್‌ಬುಲ್ಸ್ ಸ್ಕೌಟ್–ಗೈಡ್‌ಗಳ ಶಿಕ್ಷಕರುಗಳೊಂದಿಗೆ ದಳ ಸಭೆಗಳನ್ನು ನಡೆಸುವ ಬಗ್ಗೆ ಹಾಗೂ 24–25ನೇ ಸಾಲಿನ ಮಾಹಿತಿ ಪುಸ್ತಕವನ್ನು ನೀಡಿ ಚರ್ಚಿಸಲಾಯಿತು.

* ಜುಲೈ 10 ರಂದು ಚಿಕ್ಕಮಗಳೂರು ಜಿಲ್ಲಾ ವಕ್ಕಲಿಗರ ಸಂಘದ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ದಳಗಳ ಉದ್ಘಾಟನಾ ಕಾರ್ಯಕ್ರಮವನ್ನು

ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿರವರು ಉದ್ಘಾಟಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಾಚಟುವಟಿಕೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್, ಶ್ರೀ ಮನುಕುಮಾರ್ ಶಾಲೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಾದ ಶ್ರೀ ಕುಳ್ಳೇಗೌಡ, ಪ್ರಾಂಶುಪಾಲರಾದ ಶ್ರೀಮತಿ ವಿಜಯ ಮತ್ತು ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

* ಜುಲೈ 11 ರಂದು ರಾಯಲ್ ಇಂಗ್ಲೀಷ್ ಶಾಲೆಗೆ ಭೇಟಿ ನೀಡಿ ಕಬ್–ಬುಲ್‌ಬುಲ್ ತಂಡಗಳ ತೆರೆಯುವ ಬಗ್ಗೆ ಶಾಲೆಯ ಕಾರ್ಯದರ್ಶಿಗಳು ಹಾಗೂ ಪ್ರಾಂಶುಪಾಲರಿಗೆ ಮನವಿ ಮಾಡಲಾಯಿತು.

ಚಿಕ್ಕಬಳ್ಳಾಪುರ

* ಜೂನ್ 21 ರಂದು "ವಿಶ್ವ ಯೋಗ ದಿನಾಚರಣೆ" ಪ್ರಯುಕ್ತ ಜಿಲ್ಲೆಯ ವಿವಿಧ ಶಾಲೆ/ಕಾಲೇಜುಗಳಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತ್ತು ಮತ್ತು ಜಿಲ್ಲಾ ಮಟ್ಟದ ಯೋಗ ದಿನಾಚರಣೆಯಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

* ಜೂನ್ 21 ಮತ್ತು 23ರ ವರಿಗೆ ಸರ್ಕಾರಿ ಮಹಿಳಾ ಕಾಲೇಜು ಚಿಂತಾಮಣಿ ಶ್ರೀ ಉತ್ತನೂರು ರಾಜಮ್ಮ ರೇಂಜರ್ ಘಟಕದ ವತಿಯಿಂದ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಅಧ್ಯಕ್ಷತೆಯನ್ನು ಡಾ. ರಮೇಶ್, ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಕಾಲೇಜು ಚಿಂತಾಮಣಿರವರು ವಹಿಸಿದ್ದರು. ಶಿಬಿರದ ಸಂಪೂರ್ಣ ಉಸ್ತುವಾರಿಯನ್ನು ರೇಂಜರ್ ಲೀಡರ್ ಶ್ರೀಮತಿ ರೂಪರವರು ವಹಿಸಿದ್ದರು. ಶಿಬಿರದಲ್ಲಿ ರೇಂಜರ್ಸ್ ಪ್ರವೇಶ್ ಹಂತದ ಎಲ್ಲಾ ಶಿಕ್ಷಣವನ್ನು ನೀಡಲಾಯಿತು ಜೊತೆಗೆ, ಪ್ರಥಮ ಚಿಕಿತ್ಸೆ, ಕಂಪಾಸ್, ಮ್ಯಾಪಿಂಗ್, ಗಂಟುಗಳು, ಧ್ವಜ ಕಟ್ಟುವ ಬಗ್ಗೆ, ಪ್ರಾವಿಣ್ಯತಾ ಪದಕಗಳು, ಕಿಮ್ಸ್ ಗೇಮ್ ಮುಂತಾದ ವಿಷಯಗಳ ಬಗ್ಗೆ ತಿಳಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ವಿಶ್ವನಾಥ ವಿ. ಕೋಲಾರ ಜಿಲ್ಲಾ ಸಂಘಟಕರು, ಶ್ರೀ ಎನ್. ಉಮಾದೇವಿ, ನಿರಂಜನ್ ಕುಮಾರ್‌ರವರು ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ 32 ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಜೂನ್ 25 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ, ಸರ್ಕಾರಿ ಮಹಿಳಾ ಕಾಲೇಜು ಚಿಂತಾಮಣಿ ಶ್ರೀಮತಿ ಉತ್ತನೂರು ರಾಜಮ್ಮ ರೇಂಜರ್ ಘಟಕ, ಹಾಗೂ ಭಾರತೀಯ ಯುವ ರೆಡ್‌ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಸರ್ಕಾರಿ

ಮಹಿಳಾ ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಉತ್ತನೂರು ರಾಜಮ್ಮ ರೇಂಜರ್ಸ್ ಘಟಕದ ರೇಂಜರ್ಸ್‌ಗಳು ಸಕ್ರಿಯವಾಗಿ ಭಾಗವಹಿಸಿ ಸೇವೆಯನ್ನು ಸಲ್ಲಿಸಿದರು. ಕಾಲೇಜು ಪ್ರಾಂಶುಪಾಲರಾದ ಡಾ. ರಮೇಶ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು.

* ಜೂನ್ 02 ರಂದು ರಾಜ್ಯ ಸಂಸ್ಥೆಯ. ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕಗಳನ್ನು ಶಿಡ್ಲಘಟ್ಟ ತಾಲ್ಲೂಕು ತಹಶೀಲ್ದಾರ್ ಶ್ರೀ ಸ್ವಾಮಿರವರಿಗೆ, ನಗರಸಭೆ ಪೌರಾಯುಕ್ತರಾದ ಶ್ರೀ ಮಂಜುನಾಥ ರವರಿಗೆ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ, ಕಾರ್ಯಕ್ರಮ, ಶಿಬಿರಗಳಿಗೆ ಸಹಕಾರ, ಮಾರ್ಗದರ್ಶನ ಕೋರಲಾಯಿತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿಡ್ಲಘಟ್ಟ ರೋವರ್ಸ್–ರೇಂಜರ್ಸ್‌ಗಳಿಗೆ ಮುಂದಿನ ಹಂತದ ಶಿಬಿರ ಮತ್ತು ನಿಪುಣ್ ಮತ್ತು ರಾಜ್ಯ ಪುರಸ್ಕಾರ ಪರೀಕ್ಷೆಗಳ ಬಗ್ಗೆ ಮಾಹಿತಿ ನೀಡಲಾಯಿತು.

* ಜುಲೈ 04 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಸಿ. ಸುಧಾಕರ್ ರವರನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ ಇಲ್ಲಿ ಭೇಟಿ ಮಾಡಿ ಶ್ರೀಯುತರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಕ್ರಿಯಾ ಯೋಜನೆ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಚಟುವಟಿಕೆಗಳು ಮತ್ತು ಬೆಳವಣಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು. ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಡಾ. ಕೆ. ರಾಮಕೃಷ್ಣರೆಡ್ಡಿರವರು ಉಪಸ್ಥಿತರಿದ್ದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಆನಂದ್‌ರವರನ್ನು ಭೇಟಿ ಮಾಡಿ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ನೀಡುವ ಬಗ್ಗೆ ಚರ್ಚಿಸಲಾಯಿತು. ಮತ್ತು ಗ್ರಾಮ ಪಂಚಾಯಿತಿ ಅನುದಾನ ತಾಲ್ಲೂಕು ಪಂಚಾಯಿತಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಿ ಸಹಕಾರ ಮಾರ್ಗದರ್ಶನ ಕೋರಲಾಯಿತು. ನಗರಸಭೆ ಪೌರಾಯುಕ್ತರಾದ ಶ್ರೀ ಚಲಪತಿ ರವರಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಹಕಾರ ಮಾರ್ಗದರ್ಶನ ಕೋರಲಾಯಿತು.



* ಜುಲೈ 05 ರಂದು ಸರ್ಕಾರಿ ಪ್ರೌಢಶಾಲೆ ಮೇಳ್ಯ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೇಳ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ವತಿಯಿಂದ ಡೆಂಗ್ಯೂ ತಡೆಗಟ್ಟುವ ಬಗ್ಗೆ ಜಾಗೃತಿ ಜಾಥ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಜುಲೈ 05 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆ ವ್ಯಾಪ್ತಿಯ ತಹಶೀಲ್ದಾರ್ ಹಾಗೂ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಮಹೇಶ್ ಎಸ್. ಪತ್ರಿರವರಿಗೆ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು. ಶ್ರೀಯುತರು ಮಾತನಾಡಿ ಎಲ್ಲಾ ಕಾರ್ಯಕ್ರಮಗಳು ಶಿಬಿರಗಳು ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಹೊನ್ನಯ್ಯ ಜಿ.ಕೆ.ರವರಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ, ಕಾರ್ಯಕ್ರಮಗಳಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆ ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿ ಕೆ.ವಿ. ಕ್ಷೇತ್ರ ಸಮಾನ್ವಯಾಧಿಕಾರಿಗಳಾದ ಶ್ರೀ ಗಂಗರೆಡ್ಡಿರವರಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ವಾರ್ಷಿಕ ಮಹಾಸಭೆ, ಕಾರ್ಯಕಾರಿ ಸಮಿತಿ ಸಭೆ, ಸ್ಕೌಟರ್–ಗೈಡರ್ ಸಮಾವೇಶ, ಗಣತಿ, ತರಬೇತಿ,ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು. ಶ್ರೀಮತಿ ಗೀತಾ ನಗರಸಭೆ ಆಯುಕ್ತರು, ಶ್ರೀ ಸತ್ಯನಾರಾಯಣ ಸರ್ಕಲ್ ಇನ್ಸ್‌ಪೆಕ್ಟರ್, ಉಪಾಧ್ಯಕ್ಷರಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ರಮೇಶ್ ಚಂದ್ರ ದತ್ತ, ಎ.ಈ.ಎಸ್. ನ್ಯಾಷನಲ್ ಕಾಲೇಜು ಪ್ರಾಂಶುಪಾಲರಾದ ಡಾ. ಗಾಯಿತ್ರಿ ಹಾಗೂ ವಿವಿಧ ಪದಾಧಿಕಾರಿಗಳಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 06 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಬೈಲಾಂಜನಪ್ಪರವರಿಗೆ ಶ್ರೀ ಮುನಿಕೆಂಪೇಗೌಡ ಎಂ., ಉಪನಿರ್ದೇಶಕರು (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ವೆಂಕಟೇಶಪ್ಪ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಹಾಗೂ ಸ್ಥಾನಿಕ ಆಯುಕ್ತರಾದ ಶ್ರೀ ನಟರಾಜ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಂಪನ್ಮೂಲಾಧಿಕಾರಿ ಹಾಗೂ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಅರುಣ್‌ಕುಮಾರ್, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣಸ್ವಾಮಿ ಮತ್ತು ವಿವಿಧ ಪದಾಧಿಕಾರಿಗಳಿಗೆ ರಾಜ್ಯ ಸಂಸ್ಥೆಯ ವತಿಯಿಂದ ನೀಡಿರುವ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕಗಳನ್ನು ನೀಡಿ ಜಿಲ್ಲಾ ಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು ಹಾಗೂ ವಿವಿಧ ತರಬೇತಿ ಮತ್ತು ಶಿಬಿರ ಕಾರ್ಯಾಗಾರ, ಸಮಾವೇಶಗಳನ್ನು ಸಂಘಟಿಸಲು ಚರ್ಚಿಸಲಾಯಿತು. ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಚಿಕ್ಕಬಳ್ಳಾಪುರ ತಾಲ್ಲೂಕಿನ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಎನ್. ವೆಂಕಟೇಶಪ್ಪ, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ನಟರಾಜ್ ಮತ್ತು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಹಾಗೂ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಅರುಣ್ ಕುಮಾರ್, ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡುವ ಬಗ್ಗೆ ಕೋರಲಾಯಿತು. ನಂತರ ಶ್ರೀಯುತರು ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡುವುದಾಗಿ ತಿಳಿಸಿ ಶುಭಹಾರೈಸಿದರು. ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣಸ್ವಾಮಿ ಮತ್ತು ವಿವಿಧ ಪದಾಧಿಕಾರಿಗಳಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆಗಳು, ತರಬೇತಿ, ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 08 ರಂದು ಚಿಕ್ಕಬಳ್ಳಾಪುರ ವಿಧಾನಸಭಾ ಸದಸ್ಯರಾದ ಶ್ರೀ ಪ್ರದೀಪ್ ಈಶ್ವರ್‌ರವರನ್ನು ಭೇಟಿ ಮಾಡಿ, ಕ್ರಿಯಾ ಯೋಜನೆ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸಹಕಾರ ಮಾರ್ಗದರ್ಶನ ಕೋರಲಾಯಿತು.

ಶಾಸಕರು ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು ಇದೇ ದಿನ ಸಂದರ್ಭದಲ್ಲಿ ಮಾನ್ಯ ಚಿಕ್ಕಬಳ್ಳಾಪುರ ಉಪವಿಭಾಗಾಧಿಕಾರಿಗಳಾದ ಶ್ರೀ ಅಶ್ವಿನ್ ರವರಿಗೆ, ತಹಶೀಲ್ದಾರ್ ಶ್ರೀ ಆನಂದ್‌ರವರಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ ವ್ಯವಸ್ಥಾಪಕರಾದ ಶ್ರೀಮತಿ ಪವಿತ್ರ ರವರಿಗೆ 2024–25ನೇ ಸಾಲಿನ ಕ್ರೀಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಿ ಸಹಕಾರ ಕೋರಲಾಯಿತು.

* ಜುಲೈ 09 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ವ್ಯಾಪ್ತಿಯ ಬಾಗೇಪಲ್ಲಿ ತಾಲ್ಲೂಕಿನ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ರಮೇಶ್ ಜಿ.ವಿ.ರವರಿಗೆ, ಕ್ರಿಯಾ ಯೋಜನೆ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ಮತ್ತು ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಲಾಯಿತು. ಶ್ರೀಯುತರು ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡಲಾಗುವುದು ಎಂದು ತಿಳಿಸಿದರು. ಶಾಲಾ ಕಾಲೇಜುಗಳ ಮುಖ್ಯಸ್ಥರಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಹಕಾರ ಮಾರ್ಗದರ್ಶನ ಕೋರಲಾಯಿತು.

* ಜುಲೈ 16 ರಂದು ಮಾನ್ಯ ಶ್ರೀ ಪಿ.ಎಸ್. ರವೀಂದ್ರರವರು ಭಾ.ಆ.ಸೇ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಮತ್ತು ಅಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಿಕ್ಕಬಳ್ಳಾಪುರ ಅವರಿಗೆ, ಮಾನ್ಯ ಶ್ರೀ ಪ್ರಕಾಶ್ ಜಿ.ಟಿ. ನಿಟ್ಟಾಲಿ ಭಾ.ಆ.ಸೇ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣ ಅಧಿಕಾರಿರವರಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆ ಕಾರ್ಯಕ್ರಮ ಶಿಬಿರಗಳಿಗೆ ಸಹಕಾರ ಮಾರ್ಗದರ್ಶನ ನೀಡುವಂತೆ ಕೋರಲಾಯಿತು ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿ ಅನುದಾನದ ಬಿಡುಗಡೆ ಬಗ್ಗೆ ಚರ್ಚಿಸಲಾಯಿತು. ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಕಳುಹಿಸಿರುವ ಪತ್ರದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಆದೇಶ ಹೊರಡಿಸಲು ಕೋರಲಾಯಿತು. ಶ್ರೀ ಕುಶಾಲ್ ಚೌಕ್ಸೆ, ಭಾ.ಪೋ.ಸೇ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಡಾ. ಭಾಸ್ಕರ್ ಕ.ಆ.ಸೇ ಅಪರ ಜಿಲ್ಲಾಧಿಕಾರಿಗಳು ಅವರಿಗೆ, ಶ್ರೀ ರಘುನಾಥ ರೆಡ್ಡಿ, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿಗಳು. ಶ್ರೀ ಮರಿಸ್ವಾಮಿ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಶ್ರೀ ವೆಂಕಟೇಶರೆಡ್ಡಿ. ಶ್ರೀಮತಿ ಗಾಯತ್ರಿ, ಸಹಾಯಕ

ನಿರ್ದೇಶಕರು ಯುವಜನ ಕ್ರೀಡಾ ಇಲಾಖೆ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶ್ರೀಮತಿ ತೇಜ ಆನಂದ ರೆಡ್ಡಿ. ಅಧಿಕಾರಿಗಳು ಹಿಂದುಳಿದ ಕಲ್ಯಾಣ ಇಲಾಖೆ, ಮಾನ್ಯ ಸಮಾಜ ಕಲ್ಯಾಣ ಅಧಿಕಾರಿಗಳು ಉಪನಿರ್ದೇಶಕರು, ಶ್ರೀ ಜೂಜಣ್ಣ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಚಟುವಟಿಕೆಗಳು ತರಬೇತಿ ಶಿಬಿರ ಕಾರ್ಯಾಗಾರ ಸಮಾವೇಶಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ಕೋರಲಾಯಿತು.

* ಜುಲೈ 13 ರಂದು ಮಾರ್ಗದರ್ಶಿ ವಿಕಲಚೇತನರ ಸ್ವಯಂಸೇವಾ ಸಂಸ್ಥೆ ಬೆಂಗಳೂರು SCI ನವಜೀವನ ಸೇವಾ ಸಂಘ ಚಿಕ್ಕಬಳ್ಳಾಪುರ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಸರ್ಕಾರಿ ಪ್ರೌಢಶಾಲೆ, ಜಂಗಮಕೋಟೆ ಶಿಡ್ಲಘಟ್ಟ ತಾಲೂಕು ಚಿಕ್ಕಬಳ್ಳಾಪುರ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಜಂಗಮಕೋಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮ ಹಾಗೂ ಸ್ವಚ್ಛತಾ ಕಾರ್ಯಕ್ರಮ ಹಾಗೂ ಡೆಂಗಿ ಜ್ವರ ನಿಯಂತ್ರಣ ಹಾಗೂ ಜಾಗೃತಿ ಜಾಥಾ ಮತ್ತು ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ಕಲಿಕಾ ಸಾಮಗ್ರಿಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಸ್ಟೇಟ್ ಟ್ರೀಟ್ ಎಂಬ ಸ್ವಯಂಸೇವಾ ಸಂಸ್ಥೆಯ 60 ಜನ ಸ್ವಯಂ ಸೇವಕರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ

* ಜೂನ್ 24 ರಂದು ದ.ಕ. ಜಿಲ್ಲಾ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್, ಸ್ಕೌಟ್ ಮಾಸ್ಟರ್‌ಗಳ ಪ್ರಾಥಮಿಕ ತರಬೇತಿ ಶಿಬಿರವು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಇಲ್ಲಿ ನಡೆಯಿತು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆಯವರು ಗಿಡಕ್ಕೆ ನೀರು ಹಾಕುವ ಮೂಲಕ ಅಧ್ಯಕ್ಷತೆ ವಹಿಸಿ ಉದ್ಘಾಟಿಸಿದರು. ಶ್ರೀಮತಿ ಮೋಹಿನಿ ಶಿಬಿರದ ನಾಯಕರು ಹಾಗೂ ಸಹನಾಯಕರುಗಳು ಉಪಸ್ಥಿತರಿದ್ದರು. ಶ್ರೀಮತಿ ಮೋಹಿನಿ ರಾಮಚಂದ್ರರವರು ಧನ್ಯವಾದ ನೀಡಿದರು. ಶ್ರೀಮತಿ ಜಯಶ್ರೀ, ಜಿಲ್ಲಾ ತರಬೇತಿ ಆಯುಕ್ತರು (ಗೈ) ಇವರು ಕಾರ್ಯಕ್ರಮ ನಿರ್ವಹಿಸಿದರು. ಜೂನ್ 30ರಂದು ಪ್ರಾಥಮಿಕ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜಿಲ್ಲಾ ಮುಖ್ಯ

ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಸಮಾರೋಪ ಭಾಷಣವನ್ನು ಮಾಡಿ ಎಲ್ಲಾ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 03 ರಂದು ರಾಜ್ಯ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ "ಸ್ಕೌಟ್–ಗೈಡ್ ಕನ್ನಡ ಭವನ", ಸ್ವರಾಜ್ಯ ಮೈದಾನ ಮೂಡಬಿದಿರೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು ಹಾಗೂ ಕಾರವಾರ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳ ಸಮಾಲೋಚನಾ ಕಾರ್ಯಾಗಾರ ನಡೆಯಿತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಜಿಲ್ಲಾ ಮುಖ್ಯ

ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರು ವಹಿಸಿದ್ದರು. ಕಾರ್ಯಗಾರವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ದೀಪ ಬೆಳಗಿಸಿ ಉದ್ಘಾಟಿಸಿದರು. ದಕ್ಷಿಣ ಕನ್ನಡ ಕಾರವಾರ ಜಿಲ್ಲೆಗಳಿಂದ ಒಟ್ಟು 146 ಜಿಲ್ಲಾ ಹಾಗೂ ತಾಲ್ಲೂಕು ಶಿಕ್ಷಣ ಇಲಾಖೆಯ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಸಂಘದ ಪದಾಧಿಕಾರಿಗಳು, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಗಾರದಲ್ಲಿ ಭಾಗವಹಿಸಿದರು.

ದಾವಣಗೆರೆ

* ಜೂನ್ 21 ರಂದು ಶ್ರೀ ತರಳಬಾಳು ಶಾಲೆ, ಎಲೆಬೇತೂರು, ಎಸ್.ವಿ.ಎಸ್. ಕಾನ್ವೆಂಟ್, ಪಟೇಲ್ ವೀರಪ್ಪ ಶಾಲೆ, ಕಕ್ಕರಗೊಳ್ಳ, ಇನ್ನು ಮುಂತಾದ ಶಾಲೆಗಳಲ್ಲಿ ವಿಶ್ವಯೋಗ ದಿನಾಚರಣೆಯನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಆಚರಿಸಿದರು.

* ಜೂನ್ 25 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜಿನ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಕೊಟ್ರೇಶ್ ಎನ್.ಕೆ., ಜಿಲ್ಲಾ ಸಹಾಯಕ ಸ್ಕೌಟ್ ಆಯುಕ್ತರು, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

* ಜೂನ್ 29 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಜಯಪ್ರಕಾಶ್ ಜೆ. ಚಿಗಟೇರಿಯವರು ಜೂನ್ 21 ರಂದು ದೈವಾಧೀನರಾದ ಪ್ರಯುಕ್ತ ಸಂತಾಪ ಸೂಚಕ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀ ಮುರುಘ

ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಹಾಲಪ್ಪ, ಶ್ರೀ ಸಿ.ಆರ್. ಮರುಳಪ್ಪ ಜಿಲ್ಲಾ ಸಹಾಯಕ ಆಯುಕ್ತರು ಸ್ಕೌಟ್, ಶ್ರೀ ಎ. ಶಿವಪ್ಪ ಜಿಲ್ಲಾ ಸ್ಥಾನಿಕ ಆಯುಕ್ತರು ಇನ್ನು ಹಲವಾರು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಶ್ರೀ ಜಯಪ್ರಕಾಶ್ ಜೆ. ಚಿಗಟೇರಿಯವರ ಸ್ಕೌಟಿಂಗ್-ಗೈಡಿಂಗ್ ಸೇವೆಯನ್ನು ಶ್ಲಾಘಿಸಿ, ಪುಷ್ಪವನ್ನು ಅರ್ಪಿಸಿ ಮೌನಾಚರಣೆಯೊಂದಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

* ಜೂನ್ 29 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಪ್ರೌಢಶಾಲೆ ಮತ್ತು ವಾಸವಿ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಮೂಡಿಸುವ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

* ಜುಲೈ 01 ರಿಂದ 02ರ ವರೆಗೆ ಮತ್ತು ಜುಲೈ 01 ರಿಂದ 03ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಕೌಟ್-ಗೈಡ್ ರಾಜ್ಯ ತರಬೇತಿ ಕೇಂದ್ರದಲ್ಲಿ ಹೀರಕ್ ಪಂಕ್ ಚತುರ್ಥ ಚರಣ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಮೊದಲ ದಿನ ಶಿಬಿರಕ್ಕೆ ಭೇಟಿ ನೀಡಿ ಮಕ್ಕಳನ್ನು ಪರೀಕ್ಷೆಗೆ ಪ್ರೋತ್ಸಾಹಿಸಿದರು. ಶಿಬಿರಕ್ಕೆ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಭೇಟಿ ನೀಡಿದ್ದರು. ಕಬ್ ವಿಭಾಗದ ನಾಯಕರಾಗಿ ಶ್ರೀ ಕುಮಾರ ಸ್ವಾಮಿ, ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸಿದ್ದಮ್ಮ, ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಜೆ.ಎಸ್. ವಿಜಯ್ ಮತ್ತು ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸಾವಿತ್ರಮ್ಮ ಕಾರ್ಯನಿರ್ವಹಿಸಿದರು. ಶ್ರೀಮತಿ ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು ಶಿಬಿರದ ಉಸ್ತುವಾರಿಯನ್ನು ವಹಿಸಿದ್ದರು. ಶಿಬಿರದಲ್ಲಿ 89 ಕಬ್ಸ್, 68 ಬುಲ್‌ಬುಲ್ಸ್, 123 ಸ್ಕೌಟ್ಸ್ ಮತ್ತು 101 ಗೈಡ್ಸ್‌ಗಳು ಭಾಗವಹಿಸಿದ್ದರು.

* ಜುಲೈ 08 ರಿಂದ 10ರ ವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್‌ಗಳ ಪ್ರಕೃತಿ ಅಧ್ಯಯನ ಮತ್ತುಚಾರಣ ಶಿಬಿರವನ್ನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಯು.ಕೆ. ನೇಚರ್ ಸ್ಟೇನಲ್ಲಿ ಆಯೋಜಿಸಲಾಗಿತ್ತು. ಜಿಲ್ಲೆಯ ವಿವಿಧ ಕಾಲೇಜುಗಳ 101 ರೋವರ್ಸ್ ಮತ್ತು ರೇಂಜರ್ಸ್‌ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ರೋವರ್ ವಿಭಾಗದ ನಾಯಕರಾಗಿ ಶ್ರೀ ಸುರೇಶ್ ಮತ್ತು ರೇಂಜರ್ ವಿಭಾಗದ ನಾಯಕರಾಗಿ ಡಾ. ಶಕುಂತಲಾ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀ ಎನ್.ಕೆ. ಕೊಟ್ರೇಶ್, ಜಿಲ್ಲಾ ಸಹಾಯಕ ಆಯುಕ್ತರು (ಸ್ಕೌಟ್) ಭಾಗವಹಿಸಿದ್ದರು.

* ಜುಲೈ 16 ರಂದು ದಾವಣಗೆರೆ ಜಿಲ್ಲೆಗೆ ನೂತನ ಜಿಲ್ಲಾಧಿಕಾರಿಗಳಾಗಿ ಆಗಮಿಸಿರುವ ಶ್ರೀ ಜಿ.ಎಂ. ಗಂಗಾಧರಸ್ವಾಮಿ ಅವರನ್ನು ದಾವಣಗೆರೆ ಜಿಲ್ಲಾ ಸಂಸ್ಥೆ ಪರವಾಗಿ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ಐ. ಭೇಟಿ ಮಾಡಿ ಸ್ವಾಗತ ಕೋರಿ ಚಳವಳಿಯ ಬೆಳವಣಿಗೆಗೆ ಸಹಕಾರ ಕೋರಿದರು.

* ಜುಲೈ 16 ರಂದು ಶ್ರೀ ಎಸ್.ಜಿ. ಕರಿಸಿದ್ದಪ್ಪ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರನ್ನು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ಐ. ಭೇಟಿ ಮಾಡಿ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರವನ್ನು ಆಯೋಜಿಸುವ ಬಗ್ಗೆ ಚರ್ಚಿಸಲಾಯಿತು.

ಧಾರವಾಡ

* ಜೂನ್ 01 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ನಡೆದ "ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಸ್ಕೌಟಿಂಗ್-ಗೈಡಿಂಗ್ ಕುರಿತು ಮಾಹಿತಿ ಕಾರ್ಯಾಗಾರ" ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಆಯುಕ್ತರು (ಸ್ಕೌ) ಆದ ಶ್ರೀ ವ್ಹಿ.ವ್ಹಿ. ಕಟ್ಟಿ ಇವರು ವಹಿಸಿಕೊಂಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಎಸ್.ಎಸ್. ಕೆಳದಿಮಠ ಡಿ.ಡಿ.ಪಿ.ಐ. (ಆಡಳಿತ) ಮತ್ತು ಶ್ರೀಮತಿ ಜಯಶ್ರೀ ಕಾರೆಕರ ಡಿ.ಡಿ.ಪಿ.ಐ. (ಅಭಿವೃದ್ಧಿ) ಇವರ ನೇತೃತ್ವದಲ್ಲಿ ವಿಷಯ ಪರಿವೀಕ್ಷಕರು, ಡೈಯಟ್‌ನ ಉಪನ್ಯಾಸಕರು, ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಮತ್ತು ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರು, ಬಿ.ಆರ್.ಪಿ., ಸಿ.ಆರ್.ಪಿ. ಹಾಗೂ ಜಿಲ್ಲಾ ಮತ್ತು ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸಹ ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರು ಸ್ವಾಗತ ಕೋರಿ ಸ್ಕೌಟಿಂಗ ಗೈಡಿಂಗ್ ಮಾಹಿತಿ ನೀಡಿ ಇಲಾಖೆಯ ಎಲ್ಲ ಅಧಿಕಾರಿಗಳು ಸಹಕಾರ ನೀಡಲು ಕೋರಿದರು. ಶ್ರೀ ಎಸ್.ಎಸ್. ಕೆಳದಿಮಠ ಡಿ.ಡಿ.ಪಿ.ಐ. (ಆಡಳಿತ) ಇಲಾಖೆಯಿಂದ ಎಲ್ಲ ಸಹಕಾರ ನೀಡುವುದಾಗಿ ತಿಳಿಸಿದರು.

* ಜೂನ್ 05 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶ್ರೀ ವಿವೇಕ ಕವರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶ್ರೀ ಪರಶುರಾಮ ಎಫ್. ದೊಡ್ಡಮನಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಧಾರವಾಡ, ಶ್ರೀ ಜಗದೀಶ ಐ.ಎಚ್. ಜಿಲ್ಲಾ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ವಿವಿಧ ಶಾಲೆ ಮತ್ತು ಕಾಲೇಜುಗಳ ಕಬ್ಸ್ ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮತ್ತು ಸ್ಕೌಟರ್ಸ್-ಗೈಡರ್ಸ್‌ಗಳು ಭಾಗವಹಿಸಿ ಸಸಿ ನೆಡುವುದರ ಮೂಲಕ "ವಿಶ್ವ ಪರಿಸರ ದಿನಾಚರಣೆ"ಯನ್ನು ಆಚರಿಸಲಾಯಿತು.

* ಜೂನ್ 15 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ "10ನೇ ವಿಶ್ವ ಯೋಗೋತ್ಸವ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಆಯುಷ ಇಲಾಖೆಯ ಅಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ವಿವಿಧ ಶಾಲೆ ಮತ್ತು ಕಾಲೇಜುಗಳ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮತ್ತು ಸ್ಕೌಟರ್ಸ್-ಗೈಡರ್ಸ್‌ಗಳು ಭಾಗವಹಿಸಿದ್ದರು. ಯೋಗೋತ್ಸವ ಕಾರ್ಯಕ್ರಮವು ಬೆಳಿಗ್ಗೆ 7-30 ಗಂಟೆಗೆ ಪ್ರಾರಂಭವಾಗಿ 8-30ರ ವರೆಗೆ ತರಬೇತಿದಾರರಿಂದ ಯೋಗದ ಮಾಹಿತಿ ಮತ್ತು ಆಸನಗಳನ್ನು ಮಾಡಿಸಲಾಯಿತು. ಸುಮಾರು 875ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ಹಾಸನ

* ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ರವರುಗಳ ಮೂಲ ತರಬೇತಿ ಶಿಬಿರವನ್ನು ಜುಲೈ 01 ರಿಂದ 07ರ ವರಗೆ ಆಯೋಜನೆ ಮಾಡಲಾಗಿತ್ತು. ಮೂಲ ತರಬೇತಿ ಶಿಬಿರದಲ್ಲಿ ಕಬ್ಸ್ ವಿಭಾಗದಲ್ಲಿ 15 ಶಿಬಿರಾರ್ಥಿಗಳು, ಫ್ಲಾಕ್ ವಿಭಾಗದಲ್ಲಿ 10 ಶಿಬಿರಾರ್ಥಿಗಳು ಸ್ಕೌಟ್ ವಿಭಾಗದಲ್ಲಿ 31 ಶಿಬಿರಾರ್ಥಿಗಳು ಮತ್ತು ಗೈಡ್ ವಿಭಾಗದಲ್ಲಿ 15 ಶಿಬಿರಾರ್ಥಿಗಳು ಭಾಗವಹಿಸಿ ಒಟ್ಟು 72 ಅಭ್ಯರ್ಥಿಗಳು ಭಾಗವಹಿಸಿದರು. ನಾಯಕರುಗಳಾಗಿ ಶ್ರೀ ಎಂ.ಎಸ್. ಪ್ರಕಾಶ್, ಎಲ್.ಟಿ. (ಸ್ಕೌ) ಸ್ಕೌಟ್ ವಿಭಾಗ, ಗೈಡ್, ಫ್ಲಾಕ್ ವಿಭಾಗ ಶ್ರೀಮತಿ ಸೋಫಿಯ ಫರ್ನಾಂಡಿಸ್ ಎ.ಎಲ್.ಟಿ. (ಫ್ಲಾ) ಕಾರ್ಯನಿರ್ವಹಿಸಿದ್ದರು. ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಮಹದೇವ್‌ರವರು ಭೇಟಿ ಮಾಡಿ ಶಿಬಿರಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಿ ಹುರಿದುಂಬಿಸಿದ್ದಾರೆ. ತರಬೇತಿ ನಡೆಯುವ ಸಂಧರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ ಮತ್ತು ಜಿಲ್ಲೆಯ ಪದಾಧಿಕಾರಿಗಳು ಸಹಕರಿಸಿದರು.

* ಬೇಲೂರು ತಾಲ್ಲೂಕಿನ ಹಳೇಬೀಡು ಎಸ್.ಜಿ.ಆರ್. ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಚಟುವಟಿಕೆಗಳು ನಡೆಯಿತು. ಮಕ್ಕಳು ವಿವಿಧ ರೀತಿಯ ಆಹಾರಗಳನ್ನು ತಯಾರಿಸಿ ಶಿಕ್ಷಕರಿಗೆ ಬಾಳೆ ಎಲೆಯಲ್ಲಿ ಊಟ ಬಡಿಸಿದರು. ಶಾಲೆಯ ಕಾರ್ಯದರ್ಶಿ ಶ್ರೀ ಸುರೇಶ್ ಹೆಚ್.ಆರ್. ಮಕ್ಕಳಿಗೆ ಅಗತ್ಯವಾದ ಕೌಶಲಗಳನ್ನು ಬೆಳೆಸುವ ಶಕ್ತಿ ಸ್ಕೌಟಿಂಗ್‌ನಲ್ಲಿದೆ ಎಂದರು.

ದಳ ನಾಯಕರು ಹಾಗೂ ದಳನಾಯಕಿಯರು, ಗೈಡ್ ಶಿಕ್ಷಕಿ ಶ್ರೀಮತಿ ಮಮತ ಬಿ.ಎಲ್. ಉಪಸ್ಥಿತರಿದ್ದರು.

* ಹೊಳೆನರಸೀಪುರ ತಾಲ್ಲೂಕು ಸ್ಥಳೀಯ ಸಂಸ್ಥೆಯಿಂದ ತಾಲ್ಲೂಕು ಮಟ್ಟದ ಉಚಿತ ನೇತ್ರ ತಪಾಸಣೆ ಶಿಬಿರ ವನ್ನು ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಆಯೋಜನೆ ಮಾಡಲಾಗಿತ್ತು. ಶಿಬಿರದಲ್ಲಿ ತಾಲ್ಲೂಕಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿ ಸೇವೆಯನ್ನು ಸಲ್ಲಿಸಿರುತ್ತಾರೆ ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿಗಳು ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ಕುಮುದ, ಎ.ಡಿ.ಸಿ. ಶ್ರೀ ರಂಗನಾಥ್ ಉಪಸ್ಥಿತರಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ ಏಕಲವ್ಯ ರೋವರ್ ಮುಕ್ತ ದಳದ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಾಸನ ಜಯಚಾಮರಾಜೇಂದ್ರ ಆಸ್ಪತ್ರೆ ರಕ್ತ ನಿಧಿ ವಿಭಾಗಕ್ಕೆ 40 ಯೂನಿಟ್ ರಕ್ತಸಂಗ್ರಹ ಮಾಡಿಕೊಡಲಾಯಿತು.

ಹಾವೇರಿ

* ಜೂನ್ 28 ರಂದು ಹಾವೇರಿ ಜಿಲ್ಲೆಯ ಶ್ರೀಮತಿ ಲಲಿತಾದೇವಿ ಗುರುಸಿದ್ದಪ್ಪ ಸಿಂಧೂರ ಸರಕಾರಿ ಪ್ರಥಮ ಕಾಲೇಜು, ಸವಣೂರು, ಇಲ್ಲಿನ ರೋವರ್–ರೇಂಜರ್ ಘಟಕಗಳ ವತಿಯಿಂದ ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಒಂದು ದಿನದ 'ಟ್ರೆಕಿಂಗ್ ಮತ್ತು ಹೈಕಿಂಗ್' ಹಮ್ಮಿಕೊಳ್ಳಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಗಂಗಾನಾಯ್ಕ್ ಎಲ್. ಇವರ ಮಾರ್ಗದರ್ಶನದಲ್ಲಿ ರೋವರ್ ಲೀಡರ್ ಶ್ರೀ ಚಂದ್ರಕಾಂತ ಶಿರಗುಂಪಿ ಹಾಗೂ ಡಾ. ವಿಜಯಲಕ್ಷ್ಮೀ ಜಿ. ಕಾರ್ಯಕ್ರಮದ ರೂಪುರೇಷಗಳನ್ನು ಸಿದ್ಧಪಡಿಸಿದರು. ಹಾವೇರಿ ಜಿಲ್ಲಾ ಸ್ಕೌಟ್–ಗೈಡ್ ಜಿಲ್ಲಾ ಸಂಘಟಕ ಶ್ರೀ ಮಲ್ಲೇಶಪ್ಪಾ ಕೆ.ಟಿ. ಭಾಗವಹಿಸಿ ಮಾರ್ಗದರ್ಶನ ನೀಡಿದರು. 12 ರೋವರ್, 12 ರೇಂಜರ್ಸ್ ಭಾಗವಹಿಸಿ ಪ್ರಕೃತಿ

ಕೊಡಗು

* ಜುಲೈ 03 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಶಾಲಾ ಶಿಕ್ಷಣ ಇಲಾಖೆಗೆ ನೂತನವಾಗಿ ಆಗಮಿಸಿರುವ ಉಪನಿರ್ದೇಶಕರಾದ ಶ್ರೀ ರಂಗಧಾಮಪ್ಪರವರನ್ನು ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಸಂಸ್ಥೆಯ ಕಂಠವಸ್ತ್ರ ತೊಡಿಸುವುದರ ಮೂಲಕ ಸಂಸ್ಥೆಗೆ ಉಪಾಧ್ಯಕ್ಷರಾಗಿರುವ ಇವರನ್ನು ಆತ್ಮೀಯವಾಗಿ ಸಂಸ್ಥೆಗೆ ಸ್ವಾಗತಿಸಿದರು. ನಂತರ ಜಿಲ್ಲೆಯಲ್ಲಿ ಭಾರತ ಸ್ಕೌಟ್ಸ್–ಗೈಡ್ಸ್ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸ್ಥಾನಿಕ ಆಯುಕ್ತರಾದ ಹೆಚ್.ಆರ್. ಮುತ್ತಪ್ಪ, ಸಹಕಾರ್ಯದರ್ಶಿ ಬೊಳ್ಳಜಿರ ಬಿ. ಅಯ್ಯಪ್ಪ ಸ್ಕೌಟ್ ವಿಭಾಗದ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್, ಸಂಪಾಜೆ

ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಧನಂಜಯ್, ಕಾರ್ಯದರ್ಶಿ ಶ್ರೀಮತಿ ಕೆ.ಬಿ. ಉಷರಾಣಿ ಮತ್ತು ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ ಉಪಸ್ಥಿತರಿದ್ದರು.

* ಜೂನ್ 18 ರಿಂದ 24ರ ವರೆಗೆ ಕೊಡಗು ಜಿಲ್ಲಾ ಸಂಸ್ಥೆಯ ವತಿಯಿಂದ ಜವಾಹರ್ ನವೋದಯ ವಿದ್ಯಾಲಯ ಗಾಳಿಬೀಡು ಮಡಿಕೇರಿ ಇಲ್ಲಿ ಮೂಲತರಬೇತಿ ಮತ್ತು ಮುಂದುವರೆದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಗೈಡ್ ವಿಭಾಗದ ಮೂಲತರಬೇತಿ ನಾಯಕರಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕಿ ಹಾಗೂ ಗೈಡ್ ವಿಭಾಗದಲ್ಲಿ ಎ.ಎಲ್.ಟಿ ಆಗಿರುವ ಶ್ರೀಮತಿ ಅಲಿಮ ಪಿ.ಹೆಚ್. ಕಾರ್ಯನಿರ್ವಹಿಸಿದರು. ಇವರಿಗೆ ಸಹಾಯಕರಾಗಿ ದಮಯಂತಿ ಯು.ಸಿ, ಬೋಜಮ್ಮ ಮತ್ತು ಸುಲೋಚನ ಇವರು ಕಾರ್ಯನಿರ್ವಹಿಸಿದ್ದರು. ಗೈಡ್ ವಿಭಾಗದ ಮೂಲತರಬೇತಿಯಲ್ಲಿ 28 ಜನ ಶಿಕ್ಷಕಿಯರು ಭಾಗವಹಿಸಿದರು. ಸ್ಕೌಟ್ ವಿಭಾಗದ ಮೂಲತರಬೇತಿ ಶಿಬಿರದ ನಾಯಕರಾಗಿ ಶ್ರೀ ಹೆಚ್. ಶಿವಶಂಕರಪ್ಪ ಕಾರ್ಯನಿರ್ವಹಿಸಿದರು. ಇವರಿಗೆ ಸಹಾಯಕರಾಗಿ ರಂಜಿತ್ ಕೆ.ಯು., ಜಿಲ್ಲಾ ತರಬೇತಿ ಆಯುಕ್ತರು ಕೊಡಗು ಜಿಲ್ಲೆ, ಕುಮಾರಸ್ವಾಮಿ ಇವರು ಕಾರ್ಯನಿರ್ವಹಿಸಿದ್ದರು. ಸ್ಕೌಟ್ ವಿಭಾಗದ ಮೂಲತರಬೇತಿಯಲ್ಲಿ 31 ಜನ ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ಮುಂದುವರೆದ ತರಬೇತಿಯ ನಾಯಕರಾಗಿ ಶ್ರೀ ಜಿಮ್ಮಿ ಸಿಕ್ವೇರಾ, ಎಲ್.ಟಿ. (ಸ್ಕೌಟ್) ಇವರು ಕಾರ್ಯನಿರ್ವಹಿಸಿದ್ದರು. ಇವರಿಗೆ ಸಹಾಯಕರಾಗಿ ಶ್ರೀ ಭೀಮಯ್ಯ, HWB ಶ್ರೀ ಗಣೇಶ್, ಶ್ರೀಮತಿ ಉಷರಾಣಿ, ಶ್ರೀ ವಾಮನ ಟಿ.ಕೆ ಇವರು ಕಾರ್ಯನಿರ್ವಹಿಸಿದರು. ಸ್ಕೌಟ್ ವಿಭಾಗದ ಮುಂದುವರೆದ ತರಬೇತಿಯಲ್ಲಿ 14 ಜನ ಭಾಗವಹಿಸಿದರು. ಗೈಡ್ ವಿಭಾಗದ ಮುಂದುವರೆದ ತರಬೇತಿಯ ನಾಯಕರಾಗಿ ಶ್ರೀಮತಿ ಮೈಥಿಲಿ ರಾವ್ ಹೆಚ್., ಎಲ್.ಟಿ.(ಗೈಡ್) ಕಾರ್ಯನಿರ್ವಹಿಸಿದರು ಇವರಿಗೆ ಸಹಾಯಕರಾಗಿ ಶ್ರೀಮತಿ ವೀಣಾಕುಮಾರಿ, ಶ್ರೀಮತಿ ಗಾಯನ ಕೆ.ಎನ್. ಕಾರ್ಯನಿರ್ವಹಿಸಿದರು. ಗೈಡ್ ವಿಭಾಗದ ಮುಂದುವರೆದ ತರಬೇತಿಯಲ್ಲಿ 13 ಜನ ಶಿಕ್ಷಕಿಯರು ಭಾಗವಹಿಸಿದ್ದರು. ಜೂನ್ 19 ರಂದು ಬೆಳಿಗ್ಗೆ 10.30 ಗಂಟೆಗೆ ತರಬೇತಿ ಶಿಬಿರದ ಉದ್ಘಾಟನ ಕಾರ್ಯಕ್ರಮವು ನೆರವೇರಿತು ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಪಂಕಜಾಕ್ಷನ್ ರವರು ದೀಪ ಬೆಳಗಿಸಿ ಉದ್ಘಾಟಿಸಿ "ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ ನೀಡುವ ಮತ್ತು ಉಜ್ವಲ ಭವಿಷ್ಯ ರೂಪಿಸುವ ದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲೆ ಇದ್ದು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಕರ್ತವ್ಯ ನಿರ್ವಹಿಸಬೇಕು" ಎಂದು ನುಡಿದರು. ನಗರ ಸಭಾ ಪೌರಾಯುಕ್ತ ಶ್ರೀ ವಿಜಯ್‌ರವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ತರಬೇತಿ ಶಿಬಿರಗಳು ಸಮಾಜಮುಖಿಯಾಗಿ ಬೆಳೆಯಲು ಸಹಕರಿಸುತ್ತದೆ" ಎಂದರು. ಸಮಾರಂಭದ

ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಕೆ.ಟಿ. ಬೇಬಿ ಮ್ಯಾಥ್ಯುರವರು ವಹಿಸಿದ್ದರು. ಗೈಡ್ ಆಯುಕ್ತರಾದ ಪದ್ಮಶ್ರೀ ಶ್ರೀಮತಿ ರಾಣಿ ಮಾಚಯ್ಯ, ಇತರೆ ಜಿಲ್ಲಾ ಪದಾಧಿಕಾರಿಗಳು ಸ್ಕೌಟ್ಸ್-ಗೈಡ್ಸ್ ರಾಷ್ಟ್ರ ಸಂಸ್ಥೆಯ ಮಾಜಿ ಜಂಟಿ ನಿರ್ದೇಶಕಿಯಾಗಿದ್ದ ಶ್ರೀಮತಿ ಮಾಚಮ್ಮರವರು ತರಬೇತಿ ಸಂದರ್ಭದಲ್ಲಿ ಆಗಮಿಸಿ ಶಿಕ್ಷಕರಿಗೆ ಸ್ಕೌಟ್ ಗೈಡ್‌ನ ಬಗ್ಗೆ ಮಾಹಿತಿಯನ್ನು ನೀಡಿದರು.

* ಜೂನ್ 22 ರಂದು ನಡೆದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಶಿಕ್ಷಕರು "ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಉತ್ತಮ ನಾಯಕತ್ವ ಗುಣ ಹಾಗೂ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಅವರಲ್ಲಿ ಭ್ರಾತೃತ್ವ ಬೆಳೆಸುವ ಮೂಲಕ ಸಮಾಜದ ಉತ್ತಮ ಹಾಗೂ ಜವಾಬ್ದಾರಿ ನಾಗರಿಕರನ್ನಾಗಿ ರೂಪಿಸಲು ಶ್ರಮಿಸಬೇಕೆಂದು" ಕರೆ ನೀಡಿದರು.

ಕೋಲಾರ

* ಜೂನ್ 15 ಯೋಗ ದಿನಾಚರಣೆಯನ್ನು ರಂದು ಕೋಲಾರ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಹಾಗೂ ಜಿಲ್ಲಾ ಆಯುಷ್ ಇಲಾಖೆಯ ವತಿಯಿಂದ ಮಹಿಳಾ ಸಮಾಜ ಶಾಲೆಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು, ಕೋಲಾರ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ನವೀನಾ, ಆಯುಷ್ ಇಲಾಖೆಯ ಡಾ॥ ಬಸವರಾಜ್, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ಮುಂತಾದವರು ಉಪಸ್ಥಿತರಿದ್ದರು. ಇದೇ ದಿನ ಗುಪ್ತಾಸ್ ಶಾಲೆ, ಶ್ರೀ ಆರ್.ಎಲ್. ಜಾಲಪ್ಪ ಶಾಲೆಯಲ್ಲಿ ಯೋಗದಿನಾಚರಣೆಯನ್ನು ಆಚರಣೆ ಮಾಡಲಾಯಿತು.

* ಜೂನ್ 20 ರಿಂದ 25ರ ವರೆಗೆ ಕೋಲಾರ ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ಸ್ವಾಮಿ ವಿವೇಕಾನಂದ ರೋವರ್ ಕ್ರೂ ವತಿಯಿಂದ ಸೇವಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಯುತ ಶ್ರೀನಿವಾಸ ಗೌಡರವರು ಉದ್ಘಾಟನೆ ಮಾಡಿದರು. ರೋವರ್ ಲೀಡರ್ ಶ್ರೀ ಮಂಜುನಾಥ್‌ರವರ ನಾಯಕತ್ವದಲ್ಲಿ ಶಿಬಿರ ಜರುಗಿತು.

* ಜೂನ್ 24 ರಂದು ಕೋಲಾರ ಜಿಲ್ಲೆಯ 350 ಎಸ್.ಡಿ.ಎಮ್.ಸಿ. ಅಧ್ಯಕ್ಷರುಗಳಿಗೆ ಸ್ಕೌಟ್ಸ್ ಗೈಡ್ಸ್ ಮಾಹಿತಿ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ಸ್ಕೌಟ್ ಆಯುಕ್ತರಾದ

ಶ್ರೀ ಸುರೇಶ್‌ರವರು ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಜಿಲ್ಲಾ ಸ0ಘಟಕರಾದ ಶ್ರೀ ವಿ. ಬಾಬುರವರು ನಿರ್ವಹಿಸಿದರು.

* ಜೂನ್ 24 ರಿಂದ 27ರ ವರೆಗೆ ನಗರದ ಸ್ಕೌಟ್ ಭವನದಲ್ಲಿ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಶಿಬಿರ ಮತ್ತು ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಸ್ಕೌಟ್ ವಿಭಾಗಕ್ಕೆ ಶ್ರೀ ನಂಜುಂಡಪ್ಪ, ಗೈಡ್ಸ್ ವಿಭಾಗಕ್ಕೆ ಶ್ರೀಮತಿ ರೆಡ್ಡೆಮ್ಮರವರು ನಾಯಕತ್ವ ವಹಿಸಿದ್ದರು. 125 ಸ್ಕೌಟ್ಸ್–ಗೈಡ್ಸ್‌ಗಳು, 95 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಜೂನ್ 27 ರಂದು ಸ್ವಚ್ಛ ಭಾರತ್ ಯೋಜನೆಯ ಅಡಿಯಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್ ಹಾಗೂ ಶ್ರೀ ಬಾಬು, ಜಿಲ್ಲಾ ಸಂಘಟಕರ ನಾಯಕತ್ವದಲ್ಲಿ ಪಾರ್ಕ್ ಅನ್ನು ಸ್ವಚ್ಛ ಮಾಡಲಾಯಿತು.

* ಜುಲೈ 9 ರಂದು ಮುಳಬಾಗಿಲು ತಾಲ್ಲೂಕಿನ ಕೆ.ಪಿ.ಎಸ್. ಶಾಲೆ ಆವನಿಯಲ್ಲಿ ಬೀಜದ ಉಂಡೆ ತಯಾರಿಕಾ ಕಾರ್ಯಗಾರವನ್ನು ನಡೆಸಲಾಯಿತು.

* ಜುಲೈ 10 ರಂದು ಬಂಗಾರಪೇಟೆ ತಾಲ್ಲೂಕಿನ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಶಾಲೆಯಲ್ಲಿಂ ಬೀಜದ ಉಂಡೆ ತಯಾರಿ ಕಾರ್ಯಗಾರವನ್ನು ನಡೆಸಿ ಬೀಜದ ಉ0ಡೆಗಳನ್ನು ತಯಾರಿಸಲಾಯಿತು.

* ಜುಲೈ 12 ರಂದು ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜು ರೋವರ್–ರೇಂಜರ್ ನಾಯಕ ನಾಯಕಿಯರ ಸಮಾವೇಶವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು.

* ಜುಲೈ 17 ರಿಂದ 19ರ ವರೆಗೆ ರೋವರ್–ರೇಂಜರ್‌ಗಳಿಗೆ ಪದಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದ ಸಮಾರೋಪ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀಯುತ ಪಿ.ಜಿ.ಆರ್. ಸಿಂಧ್ಯಾರವರು ಭಾಗವಹಿಸಿ "ಎಲ್ಲಾ ವಿದ್ಯಾರ್ಥಿಗಳು ಉತ್ತಮವಾಗಿ ಶಿಬಿರಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಕೊಳ್ಳಬೇಕು" ಎಂದು ತಿಳಿಸಿದರು. ಜಿಲ್ಲಾಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಸ್ಕೌಟ್ ಆಯುಕ್ತರಾದ ಶ್ರೀ ಸುರೇಶ್, ಗೈಡ್ಸ್ ಆಯುಕ್ತರಾದ ಶ್ರೀಮತಿ ನವೀನಾ ಮುಂತಾದವರು ಉಪಸ್ಥಿತರಿದ್ದರು.

ರಾಯಚೂರು

* ಜೂನ್ 21 ರಂದು ಜಿಲ್ಲಾ ಆಡಳಿತ, ರಾಯಚೂರು ಹಾಗೂ ಆಯುಷ್ ಇಲಾಖೆ, ರಾಯಚೂರು ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ರಾಯಚೂರುನಲ್ಲಿ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ರಾಜಶ್ರೀ ಸಜ್ಜನ್ Pre-ALT (G) ಜಂಟಿ ಕಾರ್ಯದರ್ಶಿಗಳು ಹಾಗೂ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜೂನ್ 28 ರಂದು ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ ಜಿಲ್ಲೆಯ ಶಿಕ್ಷಣ ಅಧಿಕಾರಿಗಳ ಹಾಗೂ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಸಮಾಲೋಚನಾ ಕಾರ್ಯಾಗಾರವನ್ನು ಸಂತೋಷ ಹಬ್ ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀಮತಿ ಮಲ್ಲೇಶ್ವರಿ ಜುಜಾರೆ ASOC/ರೇಂಜರಿಂಗ್ ವಿಭಾಗ/ಕಲ್ಯಾಣ ಕರ್ನಾಟಕ ಉಸ್ತುವಾರಿ ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ತದನಂತರ ಸಸಿಗೆ ನೀರು ಹಾಕುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದರು. ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ರವರು 2024–25ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ನಂತರ ಸ್ಕೌಟ್–ಗೈಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಷಯಗಳ ಕುರಿತು ಚರ್ಚೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ

ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಹೆಚ್.ಎಂ. ಸಿದ್ದಾರಾಮಸ್ವಾಮಿ, ಜಿಲ್ಲಾ ಮುಖ್ಯ ಆಯುಕ್ತರು ಕೊಪ್ಪಳರವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಹಾಗೂ ತಾಲೂಕುಗಳ ಅಧಿಕಾರಿಗಳು, ಪದಾಧಿಕಾರಿಗಳು, ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿಗಳು, ಸಂಘಟಕರು ಭಾಗವಹಿಸಿದ್ದರು ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಶ್ರೀ ಮಾನ್ವಿರವರು ಎಲ್ಲರಿಗೂ ವಂದಿಸಿದರು. ಶ್ರೀ ಪರುಶುರಾಮ,

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಜಂಟಿ ಕಾರ್ಯದರ್ಶಿಗಳು (ಸ್ಕೌ) ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

* ಜುಲೈ 09 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಆರ್.ಎಚ್. ಸಾಗರ್ ಅವರ ಅಧ್ಯಕ್ಷತೆಯಲ್ಲಿ ತಾಲೂಕ ಸ್ಕೌಟ್ ಭವನ, ರಾಯಚೂರು ಇಲ್ಲಿ ತಾಲೂಕ ಮಟ್ಟದ ಸ್ಕೌಟರ್–ಗೈಡರ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ಮತ್ತು ಎಲ್ಲಾ ಪದಾಧಿಕಾರಿಗಳು, ಶ್ರೀ ಪರುಶುರಾಮ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಜಂಟಿ ಕಾರ್ಯದರ್ಶಿಗಳು (ಸ್ಕೌ), ಶ್ರೀ ಜಂಬಣ್ಣ ಉಪಾಧ್ಯಕ್ಷರು, ಶ್ರೀ ಹುಸೇನಿ ಭಾಷಾ, ತಾಲೂಕ ದೈಹಿಕ ಶಿಕ್ಷಣ ಪರೀವಿಕ್ಷಕರು ರಾಯಚೂರು/ ಸಹಾಯಕ ಕಾರ್ಯದರ್ಶಿಗಳು ಜಿಲ್ಲಾ ಸಂಸ್ಥೆ ರಾಯಚೂರು ಅವರು ಆಗಮಿಸಿದ್ದರು.

ಡಾ. ಪ್ರಾಣೇಶ ಉಪನ್ಯಾಸಕರು ಸರ್ಕಾರಿ ಪದವಿ ಮಹಾವಿದ್ಯಾಲಯ ರಾಯಚೂರು ಇವರು ಸಸಿಗೆ ನೀರು ಹಾಕುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ನಂತರ ಸ್ಕೌಟಿಂಗ್–ಗೈಡಿಂಗ್ ವಿಷಯಗಳು, 2024–25ನೇ ಸಾಲಿನ ತರಬೇತಿ, ಚಟುವಟಿಕೆಗಳು, ಪರೀಕ್ಷೆಗಳು, ಕಾರ್ಯಕ್ರಮಗಳ ಹಾಗೂ OYMS ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಕಬ್ ಮಾಸ್ಟರ್, ಪ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ. ಎಲ್ಲರಿಗೂ ವಂದಿಸಿದರು, ಶ್ರೀಮತಿ ಚಾಮುಂಡಿ ಲೇಡಿ ಸ್ಕೌಟ್ ಮಾಸ್ಟರ್‌ರವರು ನಿರೂಪಿಸಿದರು.

ಶಿರಸಿ (ಉ.ಕ.)

* ಶ್ರೀ ನಾಗರಾಜ್ ನಾಯ್ಕ್, ಶಿರಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್'ಗಳ ಸೇವೆ ಶ್ಲಾಘನೀಯ" ಎಂದು ಸ್ಥಳೀಯ ಸಂಸ್ಥೆ ಶಿರಸಿ ಇದರ ವಾರ್ಷಿಕ ಸಭೆ ಹಾಗೂ ಪುನಶ್ಚೇತನ ಶಿಬಿರವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವಿ.ಹೆಚ್. ಭಟ್ಕಳ್ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತಾಲೂಕ ದೈಹಿಕ ಶಿಕ್ಷಣ ವಿಷಯ ಪರೀವೀಕ್ಷಕರಾದ ಶ್ರೀ ಬಿ.ವಿ. ಗಣೇಶ ಶಿರಸಿ ಸ್ಥಳೀಯ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ಸುರೇಶ್ ಪಟಗಾರ ಆಗಮಿಸಿದ್ದರು. ದಮನಬೈಲ ಶಾಲೆಯ ಮುಖ್ಯಾಧ್ಯಾಪಕರಾದ

ಶ್ರೀಮತಿ ಗೀತಾಪಾವಸ್ಕರ್, ಎ.ಎಸ್.ಓ.ಸಿ. ಶ್ರೀವೀರೇಶ್ ಮಾದರ ಹಾಗೂ ಕಾರ್ಯದರ್ಶಿ ಶ್ರೀ ಎನ್.ಎಸ್. ಭಾಗ್ವತ್ ಉಪಸ್ಥಿತರಿದ್ದರು. ರಾಜ್ಯ ಸಂಸ್ಥೆಯು ನೀಡಿದ ಕಾರ್ಯಕ್ರಮಗಳ ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಶಿರಸಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎನ್.ಎಸ್. ಭಾಗ್ವತ್ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ಮಂಡಿಸಿದರು. ತಾಲೂಕ ದೈಹಿಕ ಶಿಕ್ಷಣ ವಿಷಯ ಪರಿವೀಕ್ಷಕರಾದ ಶ್ರೀ ಬಿ.ವಿ. ಗಣೇಶ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿ ನೀಡಿದರು. ಸ್ಕೌಟ್ಸ್ ಮಾಸ್ಟರ್ ಶ್ರೀ ಕಿರಣ್ ಫರ್ನಾಂಡಿಸ್ ಸ್ವಾಗತಿಸಿದರು. ಖಜಾಂಚಿ ಶ್ರೀ ಬಿ.ಬಿ. ಮಾಲಿ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಯಮುನಾ ಪೈ ವಂದಿಸಿದರು.

ತುಮಕೂರು

* ಜಿಲ್ಲಾ ಸಂಸ್ಥೆ ತುಮಕೂರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಹಯೋಗದೊಂದಿಗೆ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರು ಶ್ರೀಮತಿ ವಸಂತರವರು ಗಿಡವನ್ನು ನೆಡುವ ಮೂಲಕ ಆಚರಿಸಲಾಯಿತು.

* ಜೂನ್ 15 ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕಿನ ದೀಕ್ಷಾ ಹೆರಿಟೇಜ್ ಶಾಲೆಯಲ್ಲಿ ಸುಮಾರು 300 ವಿದ್ಯಾರ್ಥಿಗಳಿಂದ "ಯೋಗೋತ್ಸವ" ಕಾರ್ಯಕ್ರಮ ನಡೆಸಲಾಯಿತು.

*ಜೂನ್ 15 "ಯೋಗೋತ್ಸವ" ಕಾರ್ಯಕ್ರಮದಲ್ಲಿ ಜಿಲ್ಲೆಯ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳಿಂದ ಯೋಗಭ್ಯಾಸ ನಡೆಸಲಾಯಿತು. ಕಾರ್ಯಕ್ರಮದಲ್ಲಿ 400 ವಿದ್ಯಾರ್ಥಿಗಳು ಭಾಗವಹಿಸಿದರು.

* ಜೂನ್ 15 ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕಿನ ಕಲ್ಪತರು ಸೆಂಟ್ರಲ್ ಸ್ಕೂಲ್, ವಿದ್ಯಾರ್ಥಿಗಳಿಂದ "ಯೋಗೋತ್ಸವ" ಕಾರ್ಯಕ್ರಮದಲ್ಲಿ ಯೋಗಭ್ಯಾಸವನ್ನು 600 ವಿದ್ಯಾರ್ಥಿಗಳಿಂದ ನಡೆಸಲಾಯಿತು ಈ ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯ ಯೋಗ ತರಬೇತಿದಾರರಾದ ಶ್ರೀ ತರುಣ್‌ರವರು ವಿದ್ಯಾರ್ಥಿಗಳಿಗೆ ಯೋಗದ ಮಹತ್ವದ ಕುರಿತು ಮಾಹಿತಿ ನೀಡಿ ಯೋಗಾಸನ ನಡೆಸಿದರು.

* ಜೂನ್ 15 ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲೂಕಿನ ವಿದ್ಯಾರ್ಥಿಗಳಿಂದ ಯೋಗೋತ್ಸವ ಕಾರ್ಯಕ್ರಮದಲ್ಲಿ ಯೋಗಭ್ಯಾಸವನ್ನು 500 ವಿದ್ಯಾರ್ಥಿಗಳಿಂದ ನಡೆಸಲಾಯಿತು ಈ ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯ ಯೋಗ ತರಬೇತಿದಾರರಾದ ಶ್ರೀ ತರುಣ್‌ರವರು ವಿದ್ಯಾರ್ಥಿಗಳಿಗೆ ಯೋಗದ ಮಹತ್ವದ ಕುರಿತು ಮಾಹಿತಿ ನೀಡಿ ಯೋಗಾಸನ ನಡೆಸಿದರು.

* ಜೂನ್ 15 ರಿಂದ 17ರ ವರೆಗೆ ಬಿಎಂಎಸ್ ಕಾಲೇಜು ಹುಳಿಯಾರದಲ್ಲಿ ಜಿಲ್ಲಾ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಮೂಟ್ ಹಾಗೂ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವು ನಡೆಯಿತು. ಶಿಬಿರದ ಉದ್ಘಾಟನೆಯನ್ನು ಶ್ರೀ ಸುರೇಶ್‌ಬಾಬು, ಶಾಸಕರು ಉದ್ಘಾಟಿಸಿದರು. ಶಿಬಿರದಲ್ಲಿ ಶ್ರೀ ಯೋಗೀಶ್‌ರವರು ನಾಯಕತ್ವ ವಹಿಸಿದ್ದರು. ಶ್ರೀ ವೀರಣ್ಣ ಕಾಲೇಜಿನ ಪ್ರಾಂಶುಪಾಲರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಕಾರ್ಯಕ್ರಮದಲ್ಲಿ ಸಿಡಿಸಿಯ ಸದಸ್ಯರು ಕಾಲೇಜಿನ ಬೋಧಕರಿಂದ ವಿವಿಧ ಕಾಲೇಜಿಗಳಿಂದ 100 ರೋವರ್-ರೇಂಜರ್ಸ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಜಿಲ್ಲೆಯ ರೋವರ್ಸ್ ರಾಜ್ಯ ಪುರಸ್ಕಾರ ಪದಕ ಪಡೆಯುವ ಸಲುವಾಗಿ ಅಲೆಮಾರಿ ಪ್ರಾವೀಣ್ಯತೆ ಪದಕ ಗಳಿಸಲು ವಿವಿಧ ಶಾಲೆ ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಪರಿಸರ ಉಳಿಸುವ ಕುರಿತು ಗಿಡಮರ ಬೆಳೆಸುವುದರ ಬಗ್ಗೆ ಅದರ ಸಂರಕ್ಷಣೆ, ಹಾಗೂ ಸ್ಕೌಟ್ ಮತ್ತು ಗೈಡ್ ಚಳುವಳಿಯ ಕುರಿತು ಮಾಹಿತಿ

ನೀಡುತ್ತಾ ತುಮಕೂರಿನಿಂದ 400 ಕಿಲೋಮೀಟರ್ ವರೆಗೆ ಸೈಕಲ್ ಮೂಲಕ "ಪರಿಸರ ಸಂರಕ್ಷಣೆ ಜಾಗೃತಿ ಜಾಥಾ"ವನ್ನು ಯಶಸ್ವಿಯಾಗಿ ಮುಗಿಸಿ ಹಿಂದಿರುಗಿರುತ್ತಾರೆ.

* ಜಿಲ್ಲಾ ಸಂಸ್ಥೆ ಹಾಗೂ ಆಯುಷ್ ಇಲಾಖೆಯ ವತಿಯಿಂದ ಜೂನ್ 21 ರಂದು ನಗರದ ಪೋಲಿಸ್ ಇಲಾಖೆಯ ಆವರಣದಲ್ಲಿ ಆಯೋಜಿಸಲಾಗಿದ್ದ 10ನೇ ಅಂತರಾಷ್ಟ್ರೀಯ ಯೋಗದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ 50 ರೋವರ್ಸ್ & ರೇಂಜರ್ಸ್ ಭಾಗವಹಿಸಿದ್ದರು.

ಉಡುಪಿ

* ಜೂನ್ 24 ರಿಂದ 30ರ ವರೆಗೆ ವಿಭಾಗೀಯ ಮಟ್ಟದ ಮುಂದುವರಿದ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್ಸ್ ಶಿಬಿರವು ಡಾಕ್ಟರ್ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿನಗರ ಮಣಿಪಾಲದಲ್ಲಿ ನಡೆಯಿತು. ಈ ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ ಶ್ರೀ ಆನಂದ್ ಬಿ. ಅಡಿಗ ನಾಯಕರಾಗಿ ಅವರಿಗೆ ಸಹನಾಯಕರಾಗಿ, ಶ್ರೀ ಶೇಖರ್ ಪೂಜಾರಿ, ಶ್ರೀ ಉಮೇಶ್, ಗೈಡ್ಸ್ ವಿಭಾಗದಲ್ಲಿ ನಾಯಕರಾಗಿ ಶ್ರೀಮತಿ ವನಿತಾ ರಾವ್, ಸಹ ನಾಯಕರಾಗಿ ಶ್ರೀಮತಿ ಸುಫಲ, ಕಬ್ ವಿಭಾಗದಲ್ಲಿ ಶ್ರೀ ಹುಸೇನ್ ನಾಯಕರಾಗಿ ಸಹ ನಾಯಕರಾಗಿ ಶ್ರೀ ಅನಿಲ್, ಬುಲ್‌ಬುಲ್ ವಿಭಾಗದಲ್ಲಿ ಶ್ರೀಮತಿ ವಿನಯ್ ನಾಗರಾಜ್, ಕ್ವಾರ್ಟರ್ ಮಾಸ್ಟರ್ ಆಗಿ ಸೀನಿಯರ್ ರೋವರ್ ಶ್ರೀ ವಿಜಯ್ ಸಹಕರಿಸಿದರು. ಶ್ರೀಮತಿ ಸುಮನ್ ಶೇಖರ್ ಶಿಬಿರವನ್ನು ಸಂಘಟಿಸಿದ್ದರು.

* ಜುಲೈ 08ರಂದು ಕಾರ್ಕಳ ಸ್ಥಳೀಯ ಸಂಸ್ಥೆ ಮಹಾಸಭೆ ಹಾಗೂ ಪುನಶ್ಚೇತನ ಶಿಬಿರವು ಶ್ರೀಮದ್ ಭುವನೇಂದ್ರ ಪ್ರೌಢಶಾಲೆಯಲ್ಲಿ ಮಾನ್ಯ ವಕೀಲರಾಗಿರುವ ಶ್ರೀ ಎಂ.ಕೆ. ವಿಜಯ್ ಕುಮಾರ್ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ದಳನಾಯಕರೊಂದಿಗೆ ಯಶಸ್ವಿಯಾಗಿ ನಡೆಯಿತು. ಕಾರ್ಕಳ ಕ್ಷೇತ್ರ ಶಿಕ್ಷಣಾಧಿಕಾರಿಯರು ಭಾಗವಹಿಸಿ ಕಾರ್ಕಳದಲ್ಲಿ ಹೆಚ್ಚಿನ ಶಾಲೆಗಳನ್ನು ದಳಗಳು

ಪ್ರಾರಂಭಿಸಬೇಕು. ಬೇಕಾಗುವ ಎಲ್ಲಾ ಸಹಾಯವನ್ನು ಇಲಾಖೆಯಿಂದ ಮಾಡುತ್ತೇವೆ ಎಂಬ ಭರವಸೆ ನೀಡಿದರು. ಈ ಸಮಯದಲ್ಲಿ ರಾಜ್ಯ ಸಂಸ್ಥೆ ನೀಡಿರುವ ವಾರ್ಷಿಕ ಯೋಜನ ಚಟುವಟಿಕೆಯ ಪುಸ್ತಕವನ್ನು ಅವರಿಗೆ ನೀಡಲಾಯಿತು. ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಶಾಲು, ಹಾಕಿ ಉಡುಪಿ ಜಿಲ್ಲಾ ಮುಖ್ಯ ಆಯುಕ್ತರಾಗಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯವರನ್ನು ನೇಮಕ ಮಾಡಿದರು.

* ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರ ಮಾರ್ಗದರ್ಶನದಿಂದ ಜಿಲ್ಲಾ ಮುಖ್ಯ ಆಯುಕ್ತರಾಗಿ (ಡಿ.ಸಿ.ಸಿ.) ನೂತನವಾಗಿ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿರವರ ಪದಗ್ರಹಣ ಕಾರ್ಯಕ್ರಮವು ಜುಲೈ 14 ರಂದು ಆದಿತ್ಯವಾರದಂದು ಡಾ॥ ವಿ.ಎಸ್. ಆಚಾರ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಪ್ರಗತಿನಗರ, ಮಣಿಪಾಲದಲ್ಲಿ ನಡೆಯಿತು. ಇದರ ಪ್ರಯುಕ್ತ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಗಣಹೋಮ ನೆರವೇರಿಸುವುದರೊಂದಿಗೆ, ಜಿಲ್ಲಾ ಪದಾಧಿಕಾರಿಗಳ ಕಾರ್ಯಕಾರಿ ಸಭೆ ನಡೆಸಿ ಜಿಲ್ಲೆಯ ಪ್ರಗತಿಯು ಇನ್ನೂ ಮುಂದೆ ರಾಜ್ಯಕ್ಕೆ ಮಾದರಿಯಾಗುವ ಪಥದಲ್ಲಿ ನಾವೆಲ್ಲ ಒಂದಾಗಿ ಸಾಗೋಣ, ನಾವು ಆತ್ಮ ಸಾಕ್ಷಿಯಿಂದ ಸೇವೆ ಮಾಡೋಣ. ಇದು ಒಂದು ಉನ್ನತ ಸಂಸ್ಥೆ ಎನ್ನುವ ಮುನ್ನುಡಿಯನ್ನು ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿಯವರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್, ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು, ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 15 ರಂದು ಪ್ರಸ್ತುತ ಜಿಲ್ಲಾ ಮುಖ್ಯ ಆಯುಕ್ತರಾಗಿ ನೇಮಕಗೊಂಡು ಈಗಾಗಲೇ ಪದಗ್ರಹಣ ಮಾಡಿರುವ ಮಾನ್ಯ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ನಿಕಟಪೂರ್ವ ಜಿಲ್ಲಾ ಮುಖ್ಯ ಆಯುಕ್ತರಾಗಿದ್ದ ಶ್ರೀಮತಿ ಶಾಂತ ವಿ. ಆಚಾರ್ಯರವರನ್ನು ಭೇಟಿ ಮಾಡಿ, ಅವರ ಯೋಗ ಕ್ಷೇಮ ವಿಚಾರಿಸಿ ಅವರ ಆಶೀರ್ವಾದವನ್ನು ಪಡೆದುಕೊಂಡರು.

* ಜುಲೈ 16 ರಂದು ಮಾನ್ಯ ಪದವಿ ಪೂರ್ವ ಉಪ ನಿರ್ದೇಶಕರನ್ನು ಭೇಟಿ ಮಾಡಿ ಜುಲೈ 26ರಿಂದ ನಡೆಯುವ ರೋವರ್ ಲೀಡರ್ ಹಾಗೂ ರೇಂಜರ್ ಲೀಡರ್ ಉಪನ್ಯಾಸಕರ ಪ್ರಾಥಮಿಕ ಶಿಬಿರದಲ್ಲಿ ಕಡ್ಡಾಯವಾಗಿ ಉಪನ್ಯಾಸಕರು ಭಾಗವಹಿಸುವಲ್ಲಿ ಇನ್ನು ಹೆಚ್ಚಿನ ಯಾವ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ವಿಚಾರ ವಿನಿಮಯ ಮಾಡಿ ಮಾಹಿತಿ ಪಡೆಯಲಾಯಿತು.

* ಜುಲೈ 19 ರಂದು ಮಾನ್ಯ ಜಿಲ್ಲಾ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಯವರನ್ನು ಭೇಟಿ ಮಾಡಿ ಜುಲೈ 26 ರಿಂದ ನಡೆಯುವ ರೋವರ್ ಲೀಡರ್ ಹಾಗೂ ರೇಂಜರ್ ಲೀಡರ್ ಉಪನ್ಯಾಸಕರ ಪ್ರಾಥಮಿಕ ಶಿಬಿರದಲ್ಲಿ ಕಡ್ಡಾಯವಾಗಿ ಉಪನ್ಯಾಸಕರು ಭಾಗವಹಿಸುವಲ್ಲಿ ಹಾಗೂ ಉಡುಪಿ ಜಿಲ್ಲೆಯ ಹೆಚ್ಚಿನ ಕಾಲೇಜುಗಳಲ್ಲಿ ರೋವರ್–ರೇಂಜರ್ ದಳ ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿನಂತಿಸಲಾಯಿತು. ಮಾನ್ಯ ಪದವಿಪೂರ್ವ ಉಪ ನಿರ್ದೇಶಕರಲ್ಲಿ ಚರ್ಚಿಸುತ್ತೇನೆ ಭರವಸೆ ನೀಡಿದರು.

* ಜುಲೈ 19 ರಂದು ಮಾನ್ಯ ಪದವಿಪೂರ್ವ ಉಪ ನಿರ್ದೇಶಕರನ್ನು ಭೇಟಿ ಮಾಡಿ ಜುಲೈ 26 ರಿಂದ ನಡೆಯುವ ರೋವರ್ ಲೀಡರ್ ಹಾಗೂ ರೇಂಜರ್ ಲೀಡರ್ ಉಪನ್ಯಾಸಕರ ಪ್ರಾಥಮಿಕ ಶಿಬಿರದಲ್ಲಿ ಕಡ್ಡಾಯವಾಗಿ ಉಪನ್ಯಾಸಕರು ಭಾಗವಹಿಸುವಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಸಲಹೆಯನ್ನು ಪಡೆದು ಮುಂದಿನ ಕ್ರಮ ಕೈಗೊಂಡು ನಮ್ಮ ಪ್ರಾಥಮಿಕ ತರಬೇತಿಯನ್ನು ಯಶಸ್ವಿಗೊಳಿಸುವಂತೆ ಉಪನಿರ್ದೇಶಕರಲ್ಲಿ ವಿನಂತಿಸಲಾಯಿತು.

ವಿಜಯಪುರ

* ಜಿಲ್ಲಾ ಸಂಸ್ಥೆ ವತಿಯಿಂದ ಜೂನ್ 17 ರಂದು ಜಿಲ್ಲಾ ಕಾರ್ಯಾಲಯದಲ್ಲಿ ಸಾಯಂಕಾಲ 04.00 ಗಂಟೆಗೆ ಜಿಲ್ಲಾ ಕಾರ್ಯಕಾರಿ ಸಮಿತಿಯ ಸಭೆಯನ್ನು ಮಾನ್ಯ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಕೆತ್ತೂರು ಕರ್ನಾಟಕ ಜಾಂಬೂರೇಟ್ ವಿಜಯಪುರ ಜಿಲ್ಲೆಯಲ್ಲಿ ಸಂಘಟಿಸಲು ಪೂರ್ವತಯಾರಿಯಾಗಿ ಜಾಂಬೂರೇಟ್ ಸ್ಥಳ, ದಿನಾಂಕದ ಕುರಿತು ಚರ್ಚಿಸಲಾಯಿತು. ಜಿಲ್ಲಾ ತರಬೇತಿ ಕೇಂದ್ರದ ಅಭಿವೃದ್ಧಿ, ಜಿಲ್ಲಾ ಕಾರ್ಯಾಲಯದ ದುರಸ್ತಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳ ನೇಮಕ ಸೇರಿದಂತೆ ಹಲವಾರು ವಿಷಯಗಳ ಕುರಿತು ಚರ್ಚಿಸಲಾಯಿತು. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿಗಳಾದ ಡಾ. ಶ್ರೀನಿವಾಸ, ಪದವಿಪೂರ್ವ ಕಾಲೇಜುಗಳ ಜಿಲ್ಲಾ ನೋಡಲ್ ಅಧಿಕಾರಿಗಳಾದ ಶ್ರೀಎಮ್.ಬಿ. ಕನ್ನೂರ ಮತ್ತು ಎಲ್ಲಾ ಜಿಲ್ಲಾ ಪದಾಧಿಕಾರಿಗಳೂ ಉಪಸ್ಥಿತರಿದ್ದರು.

ವಿಜಯನಗರ

* ಜುಲೈ 12ರಂದು ವಿಜಯನಗರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ದಿವಾಕರ್ ಇವರಿಗೆ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಮಾನ್ಯ ಶ್ರೀ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ ಶಾ ಇವರಿಗೆ ಮತ್ತು ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಅನುರಾಧ ಜೆ. ಮೇಡಂ ಇವರಿಗೆ ಭರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ನೀಡಿದ 2024–25ನೇ ಸಾಲಿನ ಯೋಜನಾ ಪುಸ್ತಕಗಳನ್ನು ಮಾನ್ಯರಿಗೆ ಮಾಹಿತಿಯೊಂದಿಗೆ ನೀಡಿ ಸಹಕಾರವನ್ನು ನೀಡಲು ಕೋರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ

ಶ್ರೀ ಪಿ. ಮಂಜುನಾಥಪ್ಪ, ಜಿಲ್ಲಾ ತರಬೇತಿ ಆಯುಕ್ತರು ಗೈಡ್ ವಿಭಾಗ ಶ್ರೀಮತಿ ಎ. ರೇಣುಕಾ ಹಾಗೂ ಹೊಸಪೇಟೆ ತಾಲೂಕಿನ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ ತಿಪ್ಪೇಸ್ವಾಮಿ ಇವರುಗಳು ಹಾಜರಿದ್ದ ಕ್ಷಣ.

ಬೆಂಗಳೂರು ಗ್ರಾಮಾಂತರ

* ಜುಲೈ 18ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರು ನೆಲಮಂಗಲ ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ ಪದಾಧಿಕಾರಿಗಳಿಗೆ ಮತ್ತು ಶಿಕ್ಷಕರುಗಳಿಗೆ ಜವಾಬ್ದಾರಿ ಜೊತೆಗೆ ಸಲಹೆ ಮಾರ್ಗದರ್ಶನ ನೀಡಿದರು. ಇಂದಿನಿಂದ ನಾನು ಮತ್ತು ನನ್ನ ತಂಡ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕಾರ್ಯಕ್ರಮಗಳನ್ನು ನಡೆಸಲು ಸಮಸ್ಯೆಗಳಿದ್ದರೆ ಪರಿಹರಿಸಿ ಪ್ರಸಕ್ತ ಸಾಲಿನಲ್ಲಿ ನಮ್ಮ ಸಂಸ್ಥೆ 10ಲಕ್ಷ ಮಕ್ಕಳ ನೊಂದಣಿ ಮಾಡಿಸಲು ಗುರಿ ಹಾಕಿಕೊಂಡಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ವತಿಯಿಂದ ಮಾನ್ಯ ಆಯುಕ್ತರನ್ನು ಗೌರವಿಸಲಾಯಿತು. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ವಿ. ರಾಮಸ್ವಾಮಿ, ಬಿಇಒ ಶ್ರೀ ಎಮ್.ಹೆಚ್. ತಿಮ್ಮಯ್ಯ, ನಗರಸಭಾ ಸದಸ್ಯರಾದ ಶ್ರೀ ಸುನಿಲ್ ಮೂಡ್, ಶ್ರೀ ಕೃಷ್ಣಪ್ಪ, ಶ್ರೀ ನಾರಾಯಣ್ ರಾವ್, ಶ್ರೀ ರವಿ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ, ಬಿಬಿಎಂಪಿ ಮುಖ್ಯ ಆಯುಕ್ತರಾದ ಶ್ರೀ ಎಮ್.ಎ. ಚಲ್ಲಯ್ಯ, ಟಿ.ಪಿ.ಇ.ಓಂ ಶ್ರೀ ಗಂಗಪ್ಪ ಮಾಲಗಾಣ, ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಮೋಹನ್ ಬಾಬು, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಆರ್. ವಿಜಯ ಕುಮಾರಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಪ್ರಸಾದ್, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ವಿಜಯ್ ಕುಮಾರ್, ಶ್ರೀಮತಿ ವೇದಾವತಿ, ಶ್ರೀಮತಿ ಮಂಗಳಮ್ಮ, ಡಿ.ಓ.ಟಿ ಶ್ರೀ ಶಿವಕುಮಾರ್, ಕಾರ್ಯದರ್ಶಿ ಶ್ರೀ ಪ್ರಕಾಶ್, ಖಜಾಂಚಿ ಶ್ರೀ ಕೆ.ಎನ್. ನಾಗೇಶ್ ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಶ್ರದ್ಧಾಂಜಲಿ

ಶ್ರೀ ಪುಟ್ಟಮಾದೇಗೌಡ, ನಿವೃತ್ತ ಶಿಕ್ಷಕರು, ಚನ್ನಪಟ್ಟಣ ಇವರು ಜುಲೈ 28, 2024 ರಂದು ನಿಧನರಾದರು. ಇವರಿಗೆ 89 ವರ್ಷವಾಗಿತ್ತು, ಶ್ರೀಯುತರು ಚನ್ನಪಟ್ಟಣ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿ ಈ ಹಿಂದೆ ಸೇವೆಸಲ್ಲಿಸಿರುತ್ತಾರೆ. ಮಾಜಿ ಸಚಿವರೂ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಪಿ ಯೋಗೇಶ್ವರ್ ಇವರ ಪುತ್ರರು, ಶ್ರೀಯುತರು ಅಪಾರ ಬಂಧುಮಿತ್ರರನ್ನು ಅಗಲಿರುತ್ತಾರೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ರೆಕಾರ್ಡ್ ವಿಭಾಗದಲ್ಲಿರುವ ಶ್ರೀ ಶಿವಕುಮಾರಸ್ವಾಮಿ ಹೆಚ್.ಎಸ್ ಅವರ ಪುತ್ರಿಯಾದ **ಕುಮಾರಿ ತೇಜಸ್ವಿನಿ ಹೆಚ್.ಎಸ್ ಅವರು** ಜುಲೈ 13, 2024 ರಂದು ಬೆಂಗಳೂರಿನಲ್ಲಿ ಅಕಾಲಿಕವಾಗಿ ನಿಧನರಾದರು. ಇವರಿಗೆ 24 ವರ್ಷ ವಯಸ್ಸಾಗಿತ್ತು. ಇವರು ತಮ್ಮ ತಂದೆ–ತಾಯಿ, ಸಹೋದರಿ ಹಾಗು ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಲೆಕ್ಕಪತ್ರ ವಿಭಾಗದಲ್ಲಿರುವ ಕುಮಾರಿ ಕುಸುಮ ಇವರ ತಂದೆಯವರಾದ **ಶ್ರೀ ಮರಿಯಪ್ಪನವರು** ಜುಲೈ 14, 2024 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 57 ವರ್ಷ ವಯಸ್ಸಾಗಿತ್ತು. ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಯಶೋಧ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಕುಮಾರಿ ಅನರ್ಘ್ಯ ಗೋಖಲೆ, ಬುಲ್‌ಬುಲ್ ವಿದ್ಯಾರ್ಥಿನಿ, 4ನೇ ತರಗತಿ, ಎಸ್.ಡಿ.ಎಂ. (ಸಿ.ಬಿ.ಎಸ್.ಇ) ಸ್ಕೂಲ್, ಉಜಿರೆ, ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಜುಲೈ 28, 2024 ರಂದು ಅಕಾಲಿಕ ನಿಧನರಾದರು. ಇವಳಿಗೆ 09 ವರ್ಷ ವಯಸ್ಸಾಗಿತ್ತು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

–ರಾಜ್ಯ ಕಾರ್ಯದರ್ಶಿ

pielabz™

Practicality In Education

Kid-tested | expert- designed

Welcome to the world of STEM

10+

ACTIVITIES FOR EACH STUDENT

ALIGNED TO CURRICULUM

HANDS ON LEARNING

REAL WORLD PROBLEM SOLVING



LOVED BY TEACHERS

STUDENTS AND PARENTS

EASY ACCESS TO LESSON PLANS

EXPLAINER VIDEOS

www.pielabz.com

Nandan - 99164 99635

ಜುಲೈ 10, 2024 ರಂದು ಬೀದರ್ ಜಿಲ್ಲೆಯ ಮಾನ್ಯ ಲೋಕಸಭೆ ಸದಸ್ಯರಾದ ಶ್ರೀ ಸಾಗರ್ ಈಶ್ವರ್ ಖಂಡ್ರೆ ಅವರು ರಾಜ್ಯ ಕೇಂದ್ರ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಸ್ಥೆಯಿಂದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಬೆಳವಣಿಗೆ ಕಾರ್ಯಚಟುವಟಿಕೆಗಳು ಮತ್ತು ತರಬೇತಿ ಶಿಬಿರಗಳು ಅಭಿವೃದ್ಧಿಯ ಕುರಿತು ಚರ್ಚಿಸಲಾಯಿತು. ರಾಜ್ಯ ಸಂಸ್ಥೆ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜುಲೈ 26, 2024ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಮತ್ತು ನಗರಾಭಿವೃದ್ಧಿ ಇಲಾಖೆ ಹಾಗೂ ಬಿ.ಬಿ.ಎಂ.ಪಿ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಆರ್. ಉಮಾಶಂಕರ್, ಭಾ.ಆ.ಸೇ ಅವರನ್ನು ಭೇಟಿ ಮಾಡಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 2024–25ನೇ ಸಾಲಿನ ವಾರ್ಷಿಕ ಚಟುವಟಿಕೆಗಳ ಕುರಿತು ಚರ್ಚಿಸಿದರು. ಶ್ರೀ ಎಂ.ಎ. ಚೆಲ್ಲಯ್ಯ, ಮಾಜಿ ಜಂಟಿ ರಾಜ್ಯ ಕಾರ್ಯದರ್ಶಿ ಇವರು ಉಪಸ್ಥಿತರಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: K. Gangappa Gowda, Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001.
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026
Editor: K. Gangappa Gowda